# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರ ಕಛೇರಿಗಳು, ನೇಮಕಾತಿ ಮತ್ತು ವಿಚಾರಣೆ ವಿಭಾಗ,

ಎನ್.ಆರ್. ಚೌಕ, ಬೆಂಗಳೂರು – 560 002.

---

ಸಂಖ್ಯೆ: ಸ.ಆ.ನೇ/ಪಿಆರ್/53&54/2015-16 ದಿನಾಂಕ :27-08-2019

## ಪತ್ರಿಕಾ ಪ್ರಕಟಣೆ

**ಅಧಿಸೂಚನೆ ಸಂಖ್ಯೆ:** ನಅಇ 536 ಎಂ.ಎನ್‌ವೈ 2014, ಬೆಂಗಳೂರು ದಿ:01-02-2018.

**ವಿಷಯ:** 4000 ಪೌರ ಕಾರ್ಮಿಕರ ಹುದ್ದೆಗಳನ್ನು ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸುವ ಬಗ್ಗೆ.

*****************

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಖಾಲಿ ಇರುವ **ಗ್ರೂಪ್ "ಡಿ"** ವೃಂದದ 4000 ಪೌರಕಾರ್ಮಿಕರ ಹುದ್ದೆಗಳನ್ನು ಘನ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 536 ಎಂಎನ್‌ವೈ 2014, ಬೆಂಗಳೂರು, ದಿನಾಂಕ:01-02-2018ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಪೌರಕಾರ್ಮಿಕರ ನೇಮಕಾತಿ)(ವಿಶೇಷ) ನಿಯಮಗಳು 2017 ರಂತೆ ಅಂತರ್ಜಾಲದ ಮುಖೇನ ಭರ್ತಿ ಮಾಡಲು ಹೊರಡಿಸಿರುವಂತೆ ಭರ್ತಿ ಮಾಡಲು ಸಂಖ್ಯೆ:ಸ.ಆ.ನೇ/ಪಿಆರ್/53&54/2015-16, ದಿನಾಂಕ27-08-2019 ರಂತೆ ಉಳಿಕೆ ಮೂಲ ವೃಂದದ ಹುದ್ದೆಗಳ ಸಂಖ್ಯೆ:3510 ಮತ್ತು ಸ್ಥಳೀಯ ಮೂಲ ವೃಂದದ (ಹೈ.ಕ) ಹುದ್ದೆಗಳ ಸಂಖ್ಯೆ:490 ಒಟ್ಟು 4000 ಹುದ್ದೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಎನ್.ಎಂ.ಆರ್/ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ/ ಇತರರು ಅರ್ಹ ಅಭ್ಯರ್ಥಿಗಳಿಂದ ಅಂರ್ಜಾಲದ ಮುಖೇನ ಪಾಲಿಕೆಯ ಅಂತರ್ಜಾಲ ತಾಣ www.bbmp.gov.in ಮುಖೇನ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ:09-09-2019 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:09-10-2019 (ರಾತ್ರಿ 11- 45 ಘಂಟೆಯೊಳಗೆ)**

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಅನುಕೂಲಕ್ಕಾಗಿ ಪಾಲಿಕೆಯ ಎಲ್ಲಾ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ವಿಭಾಗ) ರವರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಿ ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದ್ದು ಇದರ ಸದುಪಯೋಗ ಪಡೆದುಕೊಳ್ಳಲು ಸೂಚಿಸಿದೆ.

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ಪ್ರತಿಯನ್ನು :**

1. ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ಕಳುಹಿಸುತ್ತಾ ಕಡ್ಡಾಯವಾಗಿ ಪ್ರಚಲಿತ ಎರಡು ಕನ್ನಡ (ವಿಜಯ ಕರ್ನಾಟಕ ಮತ್ತು ಪ್ರಜಾವಾಣಿ) ಎರಡು ಆಂಗ್ಲ ( ಟೈಮ್ಸ್ ಆಫ್ ಇಂಡಿಯಾ ಮತ್ತು ಡೆಕೆನ್ ಹೆರಾಲ್ಡ್) ಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಂಡು ಪ್ರಕಟಿತ ತುಣುಕುಗಳನ್ನು ಈ ಕಛೇರಿಗೆ ಕಳುಹಿಸಲು ತಿಳಿಸಿದೆ.

2. ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ ಹಾಗೂ ಅಧಿಸೂಚನೆ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ (ಸಾಫ್ಟ್ ಪ್ರತಿ ) ಪಾಲಿಕೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕಳುಹಿಸಿದೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಹಾನಗರ ಪಾಲಿಕೆ ಕಛೇರಿಗಳು, ನರಸಿಂಹರಾಜ ಚೌಕ, ಬೆಂಗಳೂರು-560002

## ಅಧಿಸೂಚನೆ

### ಪೌರಕಾರ್ಮಿಕರ ಹುದ್ದೆಗಳಿಗೆ ಆನ್‌ಲೈನ್ ಮುಖೇನ ಅರ್ಜಿ ಆಹ್ವಾನಿಸುವ ಬಗ್ಗೆ

**ಅಧಿಸೂಚನೆ ಸಂಖ್ಯೆ: ಸ.ಆ.ನೇ/ಪಿಆರ್/53/2015-16** **ದಿನಾಂಕ:17-08-2019**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣೆ ಹಾಗೂ ವಿವಿಧ ಸ್ವಚ್ಛತಾ ಕಾರ್ಯಗಳ ನಿರ್ವಹಣೆಗಾಗಿ ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಖಾಲಿ ಇರುವ **ಗ್ರೂಪ್ "ಡಿ"** ವೃಂದದ 4000 ಪೌರಕಾರ್ಮಿಕರ ಹುದ್ದೆಗಳನ್ನು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 536 ಎಂಎನ್‌ವೈ 2014, ಬೆಂಗಳೂರು, ದಿನಾಂಕ:01-02-2018ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಪೌರಕಾರ್ಮಿಕರ ನೇಮಕಾತಿ)(ವಿಶೇಷ) ನಿಯಮಗಳು 2017 ರನ್ವಯ ಭರ್ತಿ ಮಾಡುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿರಂತರವಾಗಿ ಕನಿಷ್ಠ 02 ವರ್ಷ ಸೇವೆ ಸಲ್ಲಿಸಿ, ಸೇವೆಯಲ್ಲಿ ಮುಂದುವರೆಯುತ್ತಿರುವ ಎನ್.ಎಂ.ಆರ್ / ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಇತರರು ಅರ್ಹ ಅಭ್ಯರ್ಥಿಗಳಿಂದ ಪಾಲಿಕೆಯ ಅಧಿಕೃತ ವೆಬ್‌ಸೈಟ್/ ಜಾಲತಾಣ www.bbmp.gov.in ಮುಖೇನ ಅಂತರ್ಜಾಲದ (ಆನ್‌ಲೈನ್) ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಇಲಾಖೆ ಮತ್ತು ಹುದ್ದೆಯ ಪದನಾಮ | ಉಳಿಕೆ ಮೂಲ ವೃಂದದ ಹುದ್ದೆಗಳು (ಹೈದ್ರಾಬಾದ್-ಕರ್ನಾಟಕ ಮೀಸಲಾತಿ ಹುದ್ದೆಗಳನ್ನು ಹೊರತುಪಡಿಸಿ) ಹುದ್ದೆಗಳ ಸಂಖ್ಯೆ |
|---|---|---|
| 01 | ಬಿಬಿಎಂಪಿಯ ಘನತ್ಯಾಜ್ಯ ನಿರ್ವಹಣೆ ವಿಭಾಗ - ಪೌರಕಾರ್ಮಿಕರು 'ಡಿ' ಗ್ರೂಪ್ | **3510** |

**ಉಳಿಕೆ ಮೂಲ ವೃಂದದ ವರ್ಗೀಕೃತ ಮೀಸಲಾತಿ ಹುದ್ದೆಗಳು.**

| ಕ್ರಸ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವರ್ಗೀಕರಣ | | | | | | | | | ವೇತನ ಶ್ರೇಣಿ |
|---|---|---|---|---|---|---|---|---|---|---|---|---|
| | | | | ಪ.ಜಾ (15%) | ಪ.ಪಂ (3%) | ಪ್ರ-1 (4%) | ಪ್ರ 2ಎ (15%) | ಪ್ರ 2ಬಿ (4%) | ಪ್ರ 3ಎ (4%) | ಪ್ರ 3ಬಿ (5%) | ಸಾ.ಅ (50%) | |
| 01 | ಪೌರಕಾರ್ಮಿಕರು | **3510** | ಇತರೆ | 106 | 21 | 29 | 105 | 28 | 28 | 35 | 351 | **17000-28950** |
| | | | ಮಹಿಳೆ | 158 | 32 | 42 | 158 | 42 | 42 | 53 | 527 | |
| | | | ಗ್ರಾಮೀಣ | 132 | 27 | 35 | 132 | 35 | 35 | 44 | 439 | |
| | | | ಅಂಗವಿಕಲ | 27 | 06 | 07 | 27 | 07 | 07 | 9 | 88 | |
| | | | ಮಾ.ಸೈ | 52 | 10 | 14 | 52 | 14 | 14 | 17 | 175 | |
| | | | ಕ.ಮಾ.ಅ | 26 | 05 | 07 | 26 | 07 | 07 | 9 | 88 | |
| | | | ಯೋ.ನಿರಾ | 26 | 05 | 07 | 26 | 07 | 07 | 8 | 87 | |
| | | | | **527** | **106** | **141** | **526** | **140** | **140** | **175** | **1755** | |

ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ:09-09-2019.

- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:09-10-2019 (ರಾತ್ರಿ 11-45 ಘಂಟೆಯೊಳಗೆ)
- **ಆನ್‌ಲೈನ್ ಅರ್ಜಿ** ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ:09-10-2019(ಬ್ಯಾಂಕ್ ಕಾರ್ಯದ ವೇಳೆಯೊಳಗೆ/Debit card/ Credit card / Netbanking ಮೂಲಕ ಶುಲ್ಕ ಪಾವತಿಗೆ ರಾತ್ರಿ 11.45 ಗಂಟೆಯೊಳಗೆ)
- ಯಾವುದೇ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಬಾರಿ ಅರ್ಜಿ ಸಲ್ಲಿಸಿದಲ್ಲಿ, ಒಂದು ಅರ್ಜಿಯನ್ನು ಪರಿಗಣಿಸಿ ಉಳಿದಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೇ ತಿರಸ್ಕರಿಸಲಾಗುವುದು.
- ಅರ್ಜಿಗಳನ್ನು ಆನ್-ಲೈನ್ (ON-LINE) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಕಡ್ಡಾಯವಾಗಿ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ / ಅಂಚೆ / ಇತರೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು Online ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿಕೊಳ್ಳತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯವೇ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದಲ್ಲದೇ ಅಂತಹವರ ವಿರುದ್ಧ ಪಾಲಿಕೆಯು ಕಾನೂನಿನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.

**ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು.**

| | | | |
|---|---|---|---|
| ಸಾ.ಅ | ಸಾಮಾನ್ಯ ಅರ್ಹತೆ | GM | General Merit |
| ಪ.ಜಾ | ಪರಿಶಿಷ್ಟ ಜಾತಿ | SC | Scheduled Caste |
| ಪ.ಪಂ | ಪರಿಶಿಷ್ಟ ಪಂಗಡ | ST | Scheduled Tribe |
| ಪ್ರ-1 | ಪ್ರವರ್ಗ-1 | CAT-1 | Category – 1 |
| 2ಎ | ಪ್ರವರ್ಗ-2ಎ | 2A | Category – 2A |
| 2ಬಿ | ಪ್ರವರ್ಗ-2ಬಿ | 2B | Category – 2B |
| 3ಎ | ಪ್ರವರ್ಗ-3ಎ | 3A | Category – 3A |
| 3ಬಿ | ಪ್ರವರ್ಗ-3ಬಿ | 3B | Category – 3B |
| ಮಾ.ಸೈ | ಮಾಜಿ ಸೈನಿಕ | Ex-MP | Ex-Military Person |
| ಗ್ರಾಮೀಣ | ಗ್ರಾಮೀಣ ಅಭ್ಯರ್ಥಿ | Rural | Rural Candidate |
| ಕ.ಮಾ.ಅ | ಕನ್ನಡ ಮಾಧ್ಯಮ ಅಭ್ಯರ್ಥಿ | KMS | Kannada Medium Studied Candidate |
| ಅಂ.ವಿ | ಅಂಗವಿಕಲ | PH | Physically Handicapped Person |
| ಯೋ.ನಿ.ಅ | ಯೋಜನೆಯಿಂದ ನಿರಾಶ್ರಿತ ಅಭ್ಯರ್ಥಿ | PDP | Project Displaced Person |
| ಹೈ.ಕ | ಹೈದ್ರಾಬಾದ್-ಕರ್ನಾಟಕ | HK | Hyderabad Karnataka |

## 2. ಶುಲ್ಕ:- Online Recruitment Process

| | |
|---|---|
| ಪ.ಜಾತಿ / ಪ.ಪಂಗಡ, ಪ್ರವರ್ಗ-1 | ರೂ.100/-ಗಳು |
| ಇತರರಿಗೆ | ರೂ.200/-ಗಳು |
| ವಿಕಲ ಚೇತನರು (PH) ಮತ್ತು ಮಾ.ಸೈ | ಶುಲ್ಕ ವಿನಾಯಿತಿ |

2(1) ಅರ್ಜಿಗಳನ್ನು Online ಮೂಲಕ ಭರ್ತಿ ಮಾಡಿ ನಿಗದಿತ ಶುಲ್ಕವನ್ನು ಅಂಚೆ ಕಛೇರಿಯ ಕೆಲಸ ವೇಳೆಯೊಳಗೆ ಬೆಂಗಳೂರು ನಗರದ ಯಾವುದೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖಾ ಕಛೇರಿಗಳಲ್ಲಿ ಪಾವತಿಸಬಹುದು. ಅಲ್ಲದೇ ಆನ್ ಪೇಮೆಂಟ್ ಮಾಡುವವರು ರಾತ್ರಿ 11.45 ಗಂಟೆಯೊಳಗಾಗಿ (Debit card/ Credit card/ Netbanking) ಮೂಲಕ ಶುಲ್ಕ ಪಾವತಿ ಮಾಡಬಹುದು. ಇದನ್ನು ಹೊರತುಪಡಿಸಿ ಬೇರೆ ಯಾವುದೇ ಮಾದರಿಯ ಶುಲ್ಕ ಪಾವತಿಯನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಒಮ್ಮೆ ಅರ್ಜಿ ಶುಲ್ಕ ಪಾವತಿಸಿದ ನಂತರ ಯಾವುದೇ

ಸಂದರ್ಭದಲ್ಲಿಯೂ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಇತರೆ ನೇಮಕಾತಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.

**ವಿಶೇಷ ಸೂಚನೆ:**

- ಅಭ್ಯರ್ಥಿಗಳು Online ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳುವುದು.
- Online ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ ಮತ್ತು ಇ-ಮೇಲ್ ಮೂಲಕ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5-30 ಗಂಟೆಯವರೆಗೆ ಅಥವಾ ಅರ್ಜಿಯಲ್ಲಿ ನೀಡಿರುವ ಇ-ಮೇಲ್ ಸಹಾಯದ ಮೂಲಕ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.
- ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಉಪ ವಿಭಾಗದ ಕಛೇರಿಯಲ್ಲಿ ಒಬ್ಬ ನೋಡಲ್ ಅಧಿಕಾರಿಯೊಂದಿಗೆ ಸಹಾಯವಾಣಿ ಕೇಂದ್ರ ತೆರೆಯಲಾಗಿರುತ್ತದೆ.

**3. ಅರ್ಹತಾ ಷರತ್ತುಗಳು:-**

**ಎ)** 1) ಭಾರತೀಯ ನಾಗರೀಕನಾಗಿರತಕ್ಕದ್ದು.

2) 45 ವರ್ಷ ವಯಸ್ಸಿನ ಒಳಗಿನವರಾಗಿರಬೇಕು

3) ಬಿಬಿಎಂಪಿ ಯಲ್ಲಿ ದಿನಾಂಕ:01-02-2018ಕ್ಕೆ 02 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಹಾಗೂ ಸೇವೆಯಲ್ಲಿ ಮುಂದುವರೆಯುತ್ತಿರುವ ಎನ್.ಎಂ.ಆರ್/ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ/ಇತರರು ಆದ್ಯತೆ ನೀಡಲಾಗುವುದು. (ESI ಮತ್ತು PF ಸೌಲಭ್ಯವನ್ನು ಹೊಂದಿರಬೇಕು)

4) ದೈಹಿಕ ದೃಢತೆ ಇರಲೇತಕ್ಕದ್ದು.(ಸರ್ಕಾರಿ ವೈದ್ಯರಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸಬೇಕು)(ವಿಕಲ ಚೇತನರಿಗೆ (PH) ಹೊರತುಪಡಿಸಿ)

5) ಕನ್ನಡ ಭಾಷೆ ಮಾತನಾಡುವ ಬಗ್ಗೆ ಜ್ಞಾನವಿರಬೇಕು. (ಕನ್ನಡ ಜ್ಞಾನದ ಬಗ್ಗೆ ಸ್ವಯಂ ಘೋಷಣಾ ಪತ್ರ ಲಗತ್ತಿಸಬೇಕು)

6) ಈ ಹುದ್ದೆಗೆ ಯಾವುದೇ ಶೈಕ್ಷಣಿಕ ವಿದ್ಯಾರ್ಹತೆ ಅಗತ್ಯವಿರುವುದಿಲ್ಲ.

**ಬಿ) ಅನರ್ಹತೆ ವಿಧಾನ :-**

1) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗುವುದಿಲ್ಲ.

2) ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರಬಾರದು

3) ಈಗಾಗಲೇ ಗಂಭೀರ ಪ್ರಕರಣದ ಕಾರಣ ಸೇವೆಯಿಂದ ತೆಗೆದುಹಾಕಿರಬಾರದು.

**4. ನೇಮಕಾತಿ ವಿಧಾನ:-**

1. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 536 ಎಂಎನ್‌ವೈ 2014, ಬೆಂಗಳೂರು, ದಿನಾಂಕ:01-02-2018ರ ನಿಯಮಗಳನ್ವಯ ನಿಯಮದ ಪ್ರಾರಂಭದ ದಿನಾಂಕಕ್ಕೆ ಮುಂಚೆ ಬಿಬಿಎಂಪಿಯಲ್ಲಿ 02 ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಮತ್ತು ಹಾಗೇ ಸೇವೆ ಸಲ್ಲಿಸಿ, ಕಾರ್ಯನಿರ್ವಹಿಸುತ್ತಿರುವುದನ್ನು ಮುಂದುವರೆಸುತ್ತಿರುವ ಎನ್.ಎಂ.ಆರ್ /ದಿನಗೂಲಿ /ಗುತ್ತಿಗೆ/ಹೊರಗುತ್ತಿಗೆ /ಇತರ ಪೌರಕಾರ್ಮಿಕ ವ್ಯಕ್ತಿಗಳಿಗೆ ಆದ್ಯತೆ ನೀಡಲಾಗುವುದು.
2. ಹೆಚ್ಚು ಸಂಖ್ಯೆಯ ವರ್ಷಗಳು ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗೆ ಕಡಿಮೆ ಸಂಖ್ಯೆಯ ವರ್ಷಗಳು ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಿಂತ ಆದ್ಯತೆ ನೀಡಲಾಗುವುದು.
3. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಪೈಕಿ ಹೆಚ್ಚು ವಯಸ್ಸಾದ ವ್ಯಕ್ತಿಯನ್ನು ಕಡಿಮೆ ವಯಸ್ಸಾದ ವ್ಯಕ್ತಿಗಿಂತ ಹಿರಿಯನೆಂದು ಪರಿಗಣಿಸುವ ಮೂಲಕ ವಯಸ್ಸಿನ ಆಧಾರದ ಮೇರೆಗೆ ಆಯ್ಕೆ ಪಟ್ಟಿ ತಯಾರಿಸಲಾಗುವುದು.
4. ಹೊರಗುತ್ತಿಗೆ ಪೌರಕಾರ್ಮಿಕರನ್ನು ಪರಿಗಣಿಸುವುದಕ್ಕಾಗಿ ಬಿಬಿಎಂಪಿ ಏಜೆನ್ಸಿಯು ದಿನಾಂಕ:01-02-2018 ಕ್ಕಿಂತ ಮುಂಚೆ ಕನಿಷ್ಠ 02 ವರ್ಷಗಳು ಕಾರ್ಯನಿರ್ವಹಿಸಿರುವ ಮತ್ತು ಭವಿಷ್ಯ ನಿಧಿ, ಇ.ಎಸ್.ಐ ಮತ್ತು ಸಂಬಳ ನೀಡಿರುವುದು ಮುಂತಾದವುಗಳ ಕುರಿತು ಸಾಕ್ಷ್ಯ ದಾಖಲೆಗಳನ್ನು ಪರಿಗಣಿಸಲಾಗುವುದು.

5. ಎನ್.ಎಂ.ಆರ್/ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ/ಇತರರಿಗೆ ಬಿಬಿಎಂಪಿ ನಿಧಿಯಿಂದ ದಿನಾಂಕ:01-02-2018 ಕ್ಕಿಂತ ಮುಂಚೆ ಕನಿಷ್ಠ 02 ವರ್ಷಗಳು ಕಾರ್ಯನಿರ್ವಹಿಸಿರುವ ಮತ್ತು ಕೂಲಿಯನ್ನು ಪಾವತಿಸಿರುವ ದಾಖಲೆಯನ್ನು ಪರಿಗಣಿಸಲಾಗುವುದು.

6. ಇಬ್ಬರು ಮತ್ತು ಹೆಚ್ಚಿನ ಅಭ್ಯರ್ಥಿಗಳ ಸೇವಾ ಅವಧಿಯು ಸಮನಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಸಂಬಂಧದಲ್ಲಿ ಆದ್ಯತಾ ಕ್ರಮವನ್ನು ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಲಾಗುವುದು, ಅಭ್ಯರ್ಥಿಗಳ ಜನ್ಮ ದಿನಾಂಕ ಮತ್ತು ಸೇವೆಯ ದಿನಾಂಕ ಒಂದೇ ಆಗಿದ್ದಲ್ಲಿ ಲಾಟರಿ ಮೂಲಕ ಆಯ್ಕೆ ಮಾಡಲಾಗುವುದು.

## 5. ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯೋಮಿತಿ:-

(ಅ) ಶೈಕ್ಷಣಿಕ ವಿದ್ಯಾರ್ಹತೆ ಅಗತ್ಯವಿರುವುದಿಲ್ಲ

(ಆ) ಕನ್ನಡ ಭಾಷೆ ಮಾತನಾಡುವ ಬಗ್ಗೆ ಜ್ಞಾನವಿರಬೇಕು. (ಕನ್ನಡ ಜ್ಞಾನದ ಬಗ್ಗೆ ಸ್ವಯಂ ಘೋಷಣಾ ಪತ್ರ ಲಗತ್ತಿಸಬೇಕು)

(ಇ) ಗರಿಷ್ಠ ವಯೋಮಿತಿ 45 ವರ್ಷಗಳನ್ನು ಮೀರತಕ್ಕದ್ದಲ್ಲ. (ಕಡ್ಡಾಯವಾಗಿ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಮತ್ತು ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯಲ್ಲಿ ESI, PF ನಲ್ಲಿ ನಮೂದಿಸಿರುವ ಜನ್ಮದಿನಾಂಕ ದಾಖಲೆಯನ್ನು ಪರಿಗಣಿಸಲಾಗುವುದು.)

## 6. ಮೀಸಲಾತಿ ಪ್ರಮಾಣ ಪತ್ರಗಳು:

ಜಾತಿ ಮೀಸಲಾತಿ ಕೋರಬಯಸುವ

- ಪ.ಜಾ/ಪ.ಪಂ ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ
- ಪ್ರವರ್ಗ-1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಹಾಗೂ
- 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ಸಂಬಂಧಿತ ತಹಶೀಲ್ದಾರರವರಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದೊಳಗಾಗಿ ಪ್ರಮಾಣ ಪತ್ರವನ್ನು ಪಡೆದಿರಬೇಕು. ಈ ಹುದ್ದೆಗಳಿಗಾಗಿ ಆಯ್ಕೆ ಹೊಂದುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಜಾತಿ ಮೀಸಲಾತಿ ಪ್ರಮಾಣ ಪತ್ರಗಳನ್ನು ಆಯಾ ನೇಮಕಾತಿ ಪ್ರಾಧಿಕಾರದವರು ಅವುಗಳ ಸಿಂಧುತ್ವದ ಪರಿಶೀಲನೆಗೆ ಒಳಪಟ್ಟಂತೆ ನೇಮಕಾತಿಗೆ ಬದ್ಧರಾಗಿತ್ತಾರೆ. ಅಧಿಸೂಚನೆಯ ಕೊನೆಯಲ್ಲಿ ಪ್ರಮಾಣ ಪತ್ರಗಳ ನಮೂನೆಯನ್ನು ನೀಡಲಾಗಿರುತ್ತದೆ.

## 7. ಮಾಜಿ ಸೈನಿಕ:

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಆರ್‌ಆರ್ 92 ದಿನಾಂಕ01-04-1992 ಮತ್ತು ಅಧಿಸೂಚನೆ ಸಂಖ್ಯೆ ಡಿಪಿಎಆರ್ 28 ಎಸ್‌ಆರ್‌ಆರ್ 95 ದಿನಾಂಕ 21-10-1995 ರನ್ವಯ ನೇರ ನೇಮಕಾತಿಗಳಲ್ಲಿ ಶೇಕಡ 10 ರಷ್ಟು ಹುದ್ದೆಗಳನ್ನು ಮಾಜಿ ಸೈನಿಕರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರಲ್ಲಿದ್ದಂತೆ ಮಾಜಿ ಸೈನಿಕರ ವಿವರಣೆ ಕೆಳಕಂಡಂತಿದೆ:

1) ಮಾಜಿ ಸೈನಿಕ ಎಂದರೆ ಕೇಂದ್ರ ಸಶಸ್ತ್ರ ದಳಗಳಾದ ನಿಯಮಿತಿ ಭೂದಳ, ನೌಕಾದಳ ಮತ್ತು ವಾಯು ದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ ಆದರೆ ಡಿಫೆನ್ಸ್, ಸೆಕ್ಯೂರಿಟಿ ಕೋರ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ ಮತ್ತು

2) ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುತ್ತಿರುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ಅಂಗವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

ಅ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

ಅಥವಾ

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಅಂತಹ ಸೇವೆಯಿಂದ ಬಿಡುಗಡೆಯಾದವರು.

ಅಥವಾ

(ಇ)ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

(ಈ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದುಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು:-

1. ನಿರಂತರ ಸೇವೆ ಸಲ್ಲಿಸಿದ ನಿವೃತ್ತಿ ಹೊಂದಿದ ಪಿಂಚಣಿದಾರರು
2. ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
3. ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

## 8. ಗ್ರಾಮೀಣ ಅಭ್ಯರ್ಥಿ

ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ (ಅಭ್ಯರ್ಥಿಯು ಮೀಸಲಾತಿ ಕೋರಿದ್ದಲ್ಲಿ) ನಿಗದಿತ ನಮೂನೆ-2 ರಲ್ಲಿ ಪ್ರಮಾಣಪತ್ರವನ್ನು ಲಗತ್ತಿಸಿರಬೇಕು.

## 9. ಕನ್ನಡ ಮಾಧ್ಯಮ ಅಭ್ಯರ್ಥಿ

ಕನ್ನಡ ಮಾಧ್ಯಮ ವ್ಯಾಸಂಗ ಮಾಡಿದ್ದಲ್ಲಿ ಪ್ರಮಾಣ ಪತ್ರ (ಅಭ್ಯರ್ಥಿಯು ಮೀಸಲಾತಿ ಕೋರಿದ್ದಲ್ಲಿ) ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರವನ್ನು ಲಗತ್ತಿಸಿರಬೇಕು. ಕನ್ನಡ ಮಾತನಾಡುವ ಜ್ಞಾನವಿರುವ ಬಗ್ಗೆ ನೋಟರಿಯವರ ಮುಂದೆ ಪ್ರಮಾಣೀಕರಿಸಿರುವ ಪ್ರಮಾಣ ಪತ್ರ ಕಡ್ಡಾಯವಾಗಿ ಲಗತ್ತಿಸಿರಬೇಕು. ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ.

## 10. ಅಂಗವಿಕಲ ಅಭ್ಯರ್ಥಿಗಳು:

<u>ಅಂಗವಿಕಲ ಅಭ್ಯರ್ಥಿ ಎಂದರೆ:</u>

(ಅ) ಕಣ್ಣಿನ ದೃಷ್ಟಿಯನ್ನು ಸರಿಪಡಿಸುವ ಕನ್ನಡಕವನ್ನು ಹಾಕಿದಾಗ ಎರಡೂ ಕಣ್ಣಿನ ಪೈಕಿ ಉತ್ತಮವಾದ ಕಣ್ಣಿನಲ್ಲಿ 6:60 ಅಥವಾ 20:2000 (ಸ್ನೆಲನ್) ಅನ್ನು ಮೀರದಿರುವ ದೃಷ್ಟಿ ಸಾಮಾರ್ಥ್ಯ ಇರುವ ವ್ಯಕ್ತಿ.

(ಆ) 20 ಡಿಗ್ರಿಗಳು ಅಥವಾ ಅದಕ್ಕೂ ಕಡಿಮೆಯ ಕೋನದವರೆಗೆ ವಿಸ್ತರಿಸುವ ದೃಷ್ಟಿ ಕ್ಷೇತ್ರದ ಪರಿಮಿತಿಯನ್ನು ಹೊಂದಿರುವ ವ್ಯಕ್ತಿ.

(ಇ) ಸಂಪೂರ್ಣವಾಗಿ ದೃಷ್ಟಿ ಸಾಮರ್ಥ್ಯವನ್ನು ಕಳೆದುಕೊಂಡಿದ್ದವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

(ಈ)ಎಲ್ಲಾ ಸಂದರ್ಭಗಳಲ್ಲಿ ಜೋರಾಗಿ ಮಾತನಾಡುವುದು ಕೇಳಿಸುವ ಅಥವಾ ಅರ್ಥವಾಗದ ಅಥವಾ ಎರಡೂ ಕಿವಿಗಳ ಪೈಕಿ ಉತ್ತಮವಾದ ಕಿವಿಯ ಶ್ರವಣ ಶಕ್ತಿಯು 90 ಡೆಸಿಬಲ್‌ಗಳಿಗೂ ಹೆಚ್ಚು ತಗ್ಗಿರುವ (ಅತ್ಯಂತ ಕಡಿಮೆ ಶ್ರವಣ ಶಕ್ತಿಯ) ಅಥವಾ ಎರಡೂ ಕಿವಿಗಳು ಶ್ರವಣ ಶಕ್ತಿಯನ್ನು ಕಳೆದುಕೊಂಡಿರುವ ವ್ಯಕ್ತಿ ಅಥವಾ ಜೀವನದ ಸಾಮಾನ್ಯ ಉದ್ದೇಶಗಳ ಸಂಬಂಧದಲ್ಲಿ ಶ್ರವಣೇಂದ್ರೀಯ ನಿಷ್ಕ್ರಿಯವಾಗಿದ್ದರೆ ಅಂತಹ ಅಭ್ಯರ್ಥಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

(ಉ)ಮೂಳೆಗಳು, ಮಾಂಸಖಂಡಗಳು ಮತ್ತು ಕೀಲುಗಳು ವಾಡಿಕೆಯ ಕಾರ್ಯನಿರ್ವಹಣೆಗೆ ಅಡಚಣೆಯಾಗುವಂತಹ ದೈಹಿಕ ದೋಷ ಅಥವಾ ವಿಕಲತೆ ಹೊಂದಿರುವ ವ್ಯಕ್ತಿಗಳು ಅರ್ಹರಾಗಿರುವುದಿಲ್ಲ.

(ಊ)ರಾಜ್ಯದ ಸರ್ಕಾರಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿರುವ ವೈದ್ಯರು ಅಂಗವಿಕಲರಿಗೆ ವೈದ್ಯಕೀಯಪ್ರಮಾಣ ಪತ್ರವನ್ನು ನೀಡಲು ಅಧಿಕಾರ ಹೊಂದಿದವರಾಗಿರುತ್ತಾರೆ.

(ಋ)ದೈಹಿಕ ಅಂಗವಿಕಲತೆ ಒಳಪಡುವ ಅಭ್ಯರ್ಥಿಗಳು ಮೂಳೆ ತಜ್ಞ (ಆರ್ಥೋಪೆಡಿಕ್ ಸರ್ಜನ್) ರಿಂದ ದೈಹಿಕ ಅಂಗವಿಕಲತೆಯ ಮೌಲೀಕರಣವನ್ನು ಅಲ್ಮಿಕೊ ಕಾನ್‌ಪುರ್ (ಡಬ್ಲ್ಯೂ.ಎಚ್.ಓ. ಸ್ಟ್ಯಾಂಡರ್ಡ)

ಇದರ ಆಧಾರದ ಮೇಲೆ ಮಾಡಿಸುವುದು ಕಡ್ಡಾಯವಾಗಿರುತ್ತದೆ.

**ಸರ್ಕಾರದ ಆದೇಶ ಸಂಖ್ಯೆ:** ಸಿಆಸುಇ 115 ಸೆನೆನಿ 2005 ದಿ:19-11-2005 ರಲ್ಲಿ ನಿಗದಿಪಡಿಸಿರುವ ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಕ್ಷಮ ವೈದ್ಯಾಧಿಕಾರಿಗಳಿಂದ ಪಡೆದಿರಬೇಕು ಮತ್ತು ಅಂಗವಿಕಲತೆ ಪ್ರಮಾಣವು ಶೇ.40 ರಿಂದ 75 ಕ್ಕಿಂತ ಹೆಚ್ಚಾಗಿರಬಾರದು. ಸರ್ಕಾರದ ಆದೇಶ ಸಂಖ್ಯೆ:- ಸಿಆಸುಇ 48 ಸೆನೆನಿ 2012 ದಿ:10/06/2013 ರಲ್ಲಿ ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರನ್ನು 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿ ಅದರಲ್ಲಿ **4, 24** ನೇ ಬಿಂದುಗಳನ್ನು ದೃಷ್ಟಿ ಮಾಂದ್ಯತೆಯುಳ್ಳವರಿಗೆ, **44** ನೇ ಬಿಂದುವನ್ನು ಶ್ರವಣ ದೋಷವುಳ್ಳವರಿಗೆ, **64**ನೇ ಬಿಂದುವನ್ನು ಚಲನವಲನ ವೈಕಲ್ಯ ಇರುವವರಿಗೆ ಮತ್ತು 84 ನೇ ಬಿಂದುವನ್ನು ಕುಷ್ಠ ರೋಗದಿಂದ ಗುಣಮುಖರಾದ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. ಸಮತಳ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರತಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳನ್ನು ಮೀಸಲಿಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:**WCD 348 PHP 2015, Bengaluru, dtd:16-06-2016** ರಂತೆ ಅಂಗವಿಕಲ ಅಭ್ಯರ್ಥಿಗಳಿಗೆ ಹುದ್ದೆಗಳನ್ನು ನಿರ್ದಿಷ್ಟಪಡಿಸಲಾಗಿದೆ. ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಅಂಗವಿಕಲ ಮೀಸಲಾತಿಯನ್ನು ರದ್ದುಪಡಿಸಲಾಗುವುದು. **ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ.** (ಈ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ)

## 11. ಯೋಜನೆ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳು :

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 71 ಸೆನೆನಿ 2001 ದಿನಾಂಕ: 24-10-2002 ರನ್ವಯ ಶೇ.5% ರಷ್ಟು ಹುದ್ದೆಗಳನ್ನು ಯೋಜನಾ ನಿರಾಶ್ರಿತರ ಗುಂಪಿಗೆ ಮೀಸಲಿರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 23 ಸೆನೆನಿ 99 ದಿನಾಂಕ: 23-11-2000 ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಆದರೆ ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬ ಅಭ್ಯರ್ಥಿಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರ್‌ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ)

## 12. ಅನುಚ್ಛೇದ 371(ಜೆ)ರನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ (ಹೈದರಾಬಾದ್-ಕರ್ನಾಟಕ) ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರದ ಅಧಿಸೂಚನೆ-II ಸಂಖ್ಯೆ: ಡಿಪಿಎಆರ್ 43 ಹೆಚ್‌ಕೆಸಿ 2013, ದಿನಾಂಕ:29-01-2014ರ ಅನುಬಂಧ-ಎ ರಲ್ಲಿ (3)(3)ನೇ ನಿಯಮ) ಸೂಚಿಸಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಆಯುಕ್ತರ ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು. ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದಾಗ ಇದರ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸಬೇಕು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುತ್ತದೆ. ಈ ಪ್ರಮಾಣ ಪತ್ರಗಳ ನಮೂನೆಯನ್ನು ಅನುಬಂಧ-1ರಲ್ಲಿ ತೋರಿಸಲಾಗಿದೆ. ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಯಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು.

(1) ಸರ್ಕಾರಿ ಸೇವೆಯಲ್ಲಿರುವ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ:

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ (ಹೈದರಾಬಾದ್-ಕರ್ನಾಟಕ) ಮೀಸಲಾತಿಯನ್ನು ಕೋರುವ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಸೇವಾ ಪುಸ್ತಕದಲ್ಲಿ ದಿನಾಂಕ:01-01-2013ಕ್ಕಿಂತ ಮುಂಚಿನ ನಮೂದಿನಲ್ಲಿ ಅವರ ಸ್ವಂತ ಊರು ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆ ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಯಾದಗಿರಿ ಕಂದಾಯ ಜಿಲ್ಲೆಯ ಅಡಿಯಲ್ಲಿ ಬರುವಂತಹ ಪ್ರದೇಶದ ನಮೂದು ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳು ತಮ್ಮ ಕಛೇರಿ ಮುಖ್ಯಸ್ಥರಿಂದ (ನೇಮಕಾತಿ ಪ್ರಾಧಿಕಾರ) ಸರ್ಕಾರದ ಅಧಿಸೂಚನೆ-ಸಂಖ್ಯೆ:ಡಿಪಿಎಆರ್ 43 ಹೆಚ್‌ಕೆಸಿ 2013, ದಿನಾಂಕ:29-01-2014ರ ಅನುಬಂಧ-ಎ ರಲ್ಲಿ (5(2)ನೇ ನಿಯಮ) ಸೂಚಿಸಿರುವ ನಮೂನೆಯಲ್ಲಿಯೇ ಸ್ವ-ಗ್ರಾಮ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು. ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದಾಗ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಜಾರಿಯಾಗಿರುವ ಮೀಸಲಾತಿ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುತ್ತದೆ. ಈ ಪ್ರಮಾಣ ಪತ್ರಗಳ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ. ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಯಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು.

## 13. ಪಾಲಿಕೆಯೊಂದಿಗೆ ಪತ್ರ ವ್ಯವಹಾರ:

ಪಾಲಿಕೆಯು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದುದರಿಂದ ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವಾಗ ಜಾಗರೂಕತೆಯಿಂದ ಭರ್ತಿ ಮಾಡತಕ್ಕದ್ದು.
ಪಾಲಿಕೆಯ ಎಲ್ಲಾ ವಲಯ ಕಛೇರಿಯಲ್ಲಿ ಒಬ್ಬ ನೋಡಲ್ ಅಧಿಕಾರಿಯೊಂದಿಗೆ ಸಹಾಯವಾಣಿ ಕೇಂದ್ರ ತೆರೆಯಲಾಗಿರುತ್ತದೆ.

## 14. ಪ್ರಾಮುಖ್ಯವಾದ ಸೂಚನೆಗಳು:

ಎ) 1) ವೃಂದ/ ಹುದ್ದೆ ಬದಲಾವಣೆಗೆ ಸೇವಾ ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ. (ಅಂದರೆ ಪೌರಕಾರ್ಮಿಕ ಹುದ್ದೆಯಿಂದ ಇತರೆ ಗ್ರೂಪ್-ಡಿ / ಸಮನಾಂತರ ಹುದ್ದೆಗಳಿಗೆ ಬದಲಾವಣೆಗೊಳ್ಳಲು ಅವಕಾಶವಿರುವುದಿಲ್ಲ.
2) ಸದರಿ ಹುದ್ದೆಗಳಿಗೆ ಯಾವುದೇ ಸಂದರ್ಶನ ನಿಗದಿಪಡಿಸಿರುವುದಿಲ್ಲ.

**ಬಿ) ದಾಖಲಾತಿ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವ ಪ್ರಮಾಣ ಪತ್ರಗಳು**

1. ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ದಾಖಲೆಗಳನ್ನು ಅರ್ಜಿ ಸಲ್ಲಿಕೆಗೆ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು ಹಾಗೂ ಮೂಲ ದಾಖಲೆಗಳನ್ನು ದಾಖಲಾತಿ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.
2. ಅಭ್ಯರ್ಥಿಯು ದೈಹಿಕವಾಗಿ ಆರೋಗ್ಯವಂತ ಮತ್ತು ಸದೃಢಕಾಯರಾಗಿರುವ ಬಗ್ಗೆ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಸರ್ಕಾರಿ ಆಸ್ಪತ್ರೆಯ ಸಕ್ಷಮ ಪ್ರಾಧಿಕಾರದಿಂದ ಪಡೆದ ದೈಹಿಕ ದೃಢತೆಯ ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದುಕೊಂಡು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
3. ಪಿ.ಎಫ್ ಹಾಗೂ ಇ.ಎಸ್.ಐ ಖಾತೆ/ಬ್ಯಾಂಕ್ ಖಾತೆ/ ಪಾಲಿಕೆಯಿಂದ ಪಡೆದ ವೇತನ/ದಿನಗೂಲಿ/ಪ್ರಮಾಣ ಪತ್ರಗಳ ಅದರ ಪ್ರತಿಯನ್ನು ಕಡ್ಡಾಯವಾಗಿ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
4. ಆಧಾರ್ ಕಾರ್ಡ್ ದಾಖಲೆ ಪ್ರತಿಗಳನ್ನು ಕಡ್ಡಾಯವಾಗಿ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
5. ಜನ್ಮ ದಿನಾಂಕಕ್ಕೆ ಸಂಬಂಧಿಸಿದಂತೆ ಜನನ ಪ್ರಮಾಣ ಪತ್ರ/ ಶಾಲಾ ದೃಢೀಕರಣ/ ಇತರೆ ದೃಢೀಕರಣಗಳ ಉದೃತ ಭಾಗದ ಮೂಲ ಪ್ರತಿಯನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
6. ಸೈನಿಕ ಸೇವೆಯಿಂದ ಬಿಡುಗಡೆಯಾದ ಪ್ರಮಾಣ ಪತ್ರ ಮತ್ತು ಪಿಂಚಣಿ / ಗ್ರಾಚ್ಯುಟಿ ಪಡೆಯುತ್ತಿರುವ ಪ್ರಮಾಣ ಪತ್ರ / ಮಾಜಿ ಸೈನಿಕ ಅವಲಂಬಿತರಾಗಿದ್ದಲ್ಲಿ, ಮಾಜಿ ಸೈನಿಕರು ಸೇವೆಯಲ್ಲಿರುವಾಗ ಮೃತಪಟ್ಟಿದ್ದಲ್ಲಿ

ಅಥವಾ ಖಾಯಂ ಆಗಿ ಗಾಯಗೊಂಡಿರುವ ಪ್ರಮಾಣ ಪತ್ರ. (ಮಾಜಿ ಸೈನಿಕ ಮೀಸಲಾತಿ ಕೋ... ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

7. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಪ್ರವರ್ಗ-3ಬಿ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳನ್ನು (ಮೀಸಲಾತಿ ಕೋರಿದ್ದಲ್ಲಿ) ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
8. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
9. ಕನ್ನಡ ಮಾತನಾಡುವ ಜ್ಞಾನದ ಬಗ್ಗೆ ನೋಟರಿಯವರ ಮುಂದೆ ಪ್ರಮಾಣೀಕರಿಸಿರುವ ಪ್ರಮಾಣ ಪತ್ರವನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
10. ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ) ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
11. ಸೇವಾನುಭವಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಯಿಂದ ಕನಿಷ್ಠ 02 ವರ್ಷ ಸೇವೆ ಸಲ್ಲಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರ / ಗುತ್ತಿಗೆ ಸಂಸ್ಥೆ ನೀಡಿರುವ ಪ್ರಮಾಣ ಪತ್ರಗಳನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
12. **ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳ ಮೀಸಲಾತಿಗೆ ಸಂಬಂಧಿಸಿದ ಅರ್ಹತಾ ಪ್ರಮಾಣ ಪತ್ರವನ್ನು ದಾಖಲಾತಿಗಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.**

**ಸಿ) ಇನ್ನಿತರೆ ಸೂಚನೆಗಳು**

1) ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಹಾಗೂ ಸಹಿಯನ್ನು ಕಡ್ಡಾಯವಾಗಿ ಅರ್ಜಿಗೆ ಅಪ್‌ಲೋಡ್ ಮಾಡಬೇಕು. ಭಾವಚಿತ್ರ ಹಾಗೂ ಸಹಿಯನ್ನು ಅಪ್‌ಲೋಡ್ ಮಾಡದ ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ.
2) ಅಪೂರ್ಣ ಅರ್ಜಿಗಳನ್ನು ಹಾಗೂ ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾದ ಮಾಹಿತಿಗಳನ್ನು ಅಪ್‌ಲೋಡ್ ಮಾಡದೇ ಇರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
3) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರ ಅದರ ಒಂದು ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ಮತ್ತು ಶುಲ್ಕ ಪಾವತಿಯ ಚಲನ್ ಅನ್ನು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಭದ್ರವಾಗಿ ತೆಗೆದಿಟ್ಟುಕೊಂಡಿರತಕ್ಕದ್ದು.
4) **ಶುಲ್ಕ ಪಾವತಿಯು** ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಕೊನೆಯ ದಿನಾಂಕವಾಗುವುದು.
5) **ದುರ್ನಡತೆ:** ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು, ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ: ಹುದ್ದೆಯ ಸಂದರ್ಶನದಿಂದ/ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.
6) **ಈ ಅಧಿಸೂಚನೆಯ ಪಾಲಿಕೆಯ ಅಧಿಕೃತ ವೆಬ್‌ಸೈಟ್** www.bbmp.gov.in ನಲ್ಲಿ ಪ್ರಚುರಪಡಿಸಲಾಗಿದೆ.
7) **ಈ ಅಧಿಸೂಚನೆ ನೇಮಕಾತಿ ಆದೇಶವಲ್ಲ**
8) **ಪೌರಕಾರ್ಮಿಕರ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ನೇಮಕಾತಿ ಪ್ರಾಧಿಕಾರಿಯಾದ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರು ಕಾಯ್ದಿರಿಸಿಕೊಂಡಿರುತ್ತಾರೆ.**

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## (ಪ.ಜಾ / ಪ.ಪಂ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

## ನಮೂನೆ – ಡಿ

(ನಿಯಮ 3ಎ (2) (3) ನೋಡಿ)

### ಅನುಸೂಚಿತ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ/ಪ.ಪಂ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ

## ಪ್ರಮಾಣ ಪತ್ರ

.................................ರಾಜ್ಯದ / ಕೇಂದ್ರಾಡಳಿತ ಪ್ರದೇಶದ *..............................ಜಿಲ್ಲೆಯ /ವಿಭಾಗದ ........................ಗ್ರಾಮ/ಪಟ್ಟಣದ * ನಿವಾಸಿಯಾದ ಶ್ರೀ / ಶ್ರೀಮತಿ ..........................ಎಂಬುವವರ ಮಗ /ಮಗಳಾದ ಶ್ರೀ / ಶ್ರೀಮತಿ ...............................ಇವರು ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವ ಜಾತಿ/ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣೀಕರಿಸಿದೆ.

- ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳೂ) ಆದೇಶ 1951

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ತಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971ರ ಮೂಲ ತಿದ್ದುಪಡಿಯಾದಂತೆ)

- ಸಂವಿಧಾನ
- ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956
- ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡಿ ಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959.
- ಸಂವಿಧಾನ (ದಾದರ್ ಮತ್ತು ನಾಗರಹವೇಲಿ) ಅನುಸೂಚಿತ ಜಾತಿಗಳ ಆದೇಶ 1962
- ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964.
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967.
- ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ/ಬುಡಕಟ್ಟುಗಳ ಆದೇಶ 1988
- ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ/ಶ್ರೀಮತಿ/ಕುಮಾರಿ * ........................................ ಮತ್ತು / ಅಥವಾ ಅವನ * / ಅವಳ* ಕುಟುಂಬವು ....................................................ರಾಜ್ಯ/ಕೇಂದ್ರಾಡಳಿತ.......................................... ಪ್ರದೇಶದ..................................ಜಿಲ್ಲಾ/ವಿಭಾಗದ........................ ಗ್ರಾಮ/ಪಟ್ಟಣದ ಸಾಮಾನ್ಯ ನಿವಾಸಿ(ಗಳು)

ಸಹಿ ----------------------------

ತಹಶೀಲ್ದಾರ್ ----------------------

ಸ್ಥಳ:
ದಿನಾಂಕ:

ಪದನಾಮ
ಕಛೇರಿಯ ಮೊಹರಿನೊಂದಿಗೆ

**ರಾಜ್ಯ / ಕೇಂದ್ರಾಡಳಿತ ಪ್ರದೇಶ ***
***ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟು ಬಿಡಿ / ಹೊಡೆದು ಹಾಕಿ**

**ಸೂಚನೆ:** ಇಲ್ಲಿ ಉಪಯೋಗಿಸಿದ **'ಸಾಮಾನ್ಯ ನಿವಾಸಿಗಳು'** ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950ರ 20ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

ಭಾರತ ಸರ್ಕಾರದ ಪತ್ರ ಸಂಖ್ಯೆ: ಬಿಸಿ 12028/2/76–ಎಸ್‌ಸಿಟಿ–1 ಗೃಹ ಮಂತ್ರಾಲಯ ಅನುಸಾರವಾಗಿ, ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮವಾಗಿರುವುದಕ್ಕಾಗಿ, ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ) ಪತ್ರ ಸಂಖ್ಯೆ:13–2–74 ಇಎಸ್‌ಟಿ (ಎಸ್‌ಸಿಟಿ) ದಿನಾಂಕ: 05.08.1975ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ತನ್ನ ಖಾಯಂ ವಾಸ ಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

**(ಪ್ರರ್ವ–1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**

**ನಮೂನೆ – ಇ**

(ನಿಯಮ 3ಎ (2) (3) ನೋಡಿ)

**ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ**

......................................ಗ್ರಾಮ / ಪಟ್ಟಣದ / ನಗರ ನಿವಾಸಿಯಾದ ........................... ನಿವಾಸಿಯಾದ ಶ್ರೀ / ಶ್ರೀಮತಿ .............................................ಇವರ ಮಗ /ಮಗಳು / ಪತ್ನಿ / ಪತಿಯಾದ ಶ್ರೀ / ಶ್ರೀಮತಿ ............................................. ಇವರು ಹಿಂದುಳಿದ ವರ್ಗಗಳ (ಪ್ರವರ್ಗ ...............................................................ಜಾತಿಯ ........................... ಉಪ ಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

**ಸ್ಥಳ:**
**ದಿನಾಂಕ:**

**ತಹಶೀಲ್ದಾರ್**

**ತಾಲ್ಲೂಕು**

**ಕಛೇರಿಯ ಮೊಹರು**

**(ಪ್ರವರ್ಗ – 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**

**ನಮೂನೆ – ಎಫ್**

(ನಿಯಮ 3ಎ (2) (3)ನ್ನು ನೋಡಿ)

**ಹಿಂದುಳಿದ ವರ್ಗಗಳಿಗೆ (2ಎ, 2ಬಿ, 3ಎ, 3ಬಿ) ಸೇರಿದ ಅಭ್ಯರ್ಥಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ)**

..................................ರಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ ...................... ಇವರ ಮಗ/ ಮಗಳು/ ಪತಿ/ ಪತ್ನಿಯಾದ ಶ್ರೀ / ಶ್ರೀಮತಿ/ ಕುಮಾರಿ ...........................ಇವರು ಮತ್ತು ಆತನ / ಅವಳ ತಂದೆ / ತಾಯಿ/ ಪೋಷಕರು / ಪತ್ನಿ / ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ:ಎಸ್‌ಡಬ್ಲೂಡಿ 225 ಬಿಸಿಎ 2000 ದಿನಾಂಕ: 30-03-2002 ರಲ್ಲಿ ನಿರ್ದಿಷ್ಟ ಪಡಿಸಿದ ಮೇಲುಸ್ತರದ (ಕ್ರೀಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು:

ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕರಾಗಲಿ / ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು:

**ಅಥವಾ**

ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ:

**ಅಥವಾ**

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ.6000-12000/- ಪ್ರಾರಂಭಿಕ ಹಂತ) ಕಡಿಮೆಯಿಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು:

**ಅಥವಾ**

ಆತನ / ಆಕೆಯ ತಂದೆ ತಾಯಿ/ ಪೋಷಕರು / ಪತ್ನಿ / ಪತಿಯ ಆದಾಯವು ಎರಡು ಲಕ್ಷ ಮೀರುವುದಿಲ್ಲವೆಂದು:

**ಅಥವಾ**

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ರಲ್ಲಿ ನಿಗದಿಪಡಿಸಿರುವಂತೆ ಆತನ / ಆಕೆಯ ತಂದೆ ತಾಯಿ / ಪೋಷಕರು / ಪತ್ನಿ / ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕ / ಪತ್ನಿ / ಪತಿಯು ಅಥವಾ ಇವರಿಬ್ಬರೂ 10 ಯೂನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 225 ಬಿಸಿಎ 2000 ದಿನಾಂಕ:30.03.2002ರ ಅನ್ವಯ ಶ್ರೀ / ಶ್ರೀಮತಿ / ಕುಮಾರಿ ..........................................ಇವರು ............................ಜಾತಿಗೆ ಸೇರಿದ................................ಉಪಜಾತಿಯವರಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 225 ಬಿಸಿಎ 2002 ದಿನಾಂಕ:30.03.2000ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ.......................................... (2ಎ, 2ಬಿ, 3ಎ, 3ಬಿ) ಕ್ಕೆ ಸೇರಿರುತ್ತಾರೆ.

**ಸ್ಥಳ:**

**ದಿನಾಂಕ:**

**ತಹಶೀಲ್ದಾರ್**

---------- **ತಾಲೂಕು**

## ಪ್ರಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಿದ ಮಾಹಿತಿ / ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ: ತಮ್ಮ ವಿಧೇಯ

ದಿನಾಂಕ: (ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತಾ, ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ಸ್ಥಳ: ತಂದೆ/ತಾಯಿ/ಪೋಷಕರ ಸಹಿ

ದಿನಾಂಕ: (ತಂದೆ/ತಾಯಿ ಜೀವಂತವಿಲ್ಲದಿದ್ದರೆ)

(ಹೆಂಡತಿ/ಗಂಡ/ಇವರ ಸಹಿ)

## ಸ್ಥಳೀಯ ಇಬ್ಬರು ಸಾಕ್ಷಿದಾರರು

ಅಭ್ಯರ್ಥಿಯ ಮತ್ತು ಅವರ ತಂದೆ/ತಾಯಿ/ಪೋಷಕರು/ಪತಿ/ಪತ್ನಿ ಇವರನ್ನು ಹಾಗೂ ಇವರ ಸಹಿಯನ್ನು ಗುರುತಿಸುತ್ತೇವೆ.

ಸಾಕ್ಷಿದಾರರ ಸಹಿ 1)

(ಪೂರ್ಣ ವಿಳಾಸದೊಂದಿಗೆ) 2)

### ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ/ಶ್ರೀಮತಿ ........................................................ ಎಂಬುವವರ ಮಗ / ಮಗಳು / ಪತಿ / ಪತ್ನಿ, ಶ್ರೀ/ಶ್ರೀಮತಿ/ಕುಮಾರಿ ..............................ಎಂಬುವವರು ಕರ್ನಾಟಕ ರಾಜ್ಯದ .............ಜಿಲ್ಲೆಯ ವಿಭಾಗ ..............................ಗ್ರಾಮ/ಪಟ್ಟಣ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆ ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.

2. ಶ್ರೀ/ಶ್ರೀಮತಿ/ಕುಮಾರಿ ....................................ಇವರ ತಂದೆ/ತಾಯಿ/ಪೋಷಕರು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ:31.01.1995 ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ತರದಲ್ಲಿ (Creamy Layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

**ಸ್ಥಳ:** **ತಹಶೀಲ್ದಾರ್**
**ದಿನಾಂಕ:** **ತಾಲ್ಲೂಕು**
**ಕಛೇರಿಯ ಮೊಹರು**

**ಸೂಚನೆ-1** : ಇದರಲ್ಲಿ ಉಪಯೋಗಿಸಲಾದ 'ಸಾಮಾನ್ಯ ನಿವಾಸಿ' ಎಂಬ ಪದವು 1950ರ ಜನತಾ ಪ್ರಾತಿನಿಧ್ಯ ಕಾಯ್ದೆಯ 20ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.

**ಸೂಚನೆ-2** : ಪರಿಶೀಲನಾ ಪ್ರಮಾಣ ಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ:ಎಸ್‌ಡಬ್ಲೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ:31.01.1995 ರನ್ವಯ ಮೇಲುಸ್ತರ (Creamy Layer) ದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕದ್ದು.

## ನಮೂನೆ – 2
## ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ಶ್ರೀಮತಿ ........................................................ ರವರ ಮಗ / ಮಗಳು / ಪತಿ / ಪತ್ನಿ, ಶ್ರೀ/ಶ್ರೀಮತಿ/ಕುಮಾರಿ ......................ಜಿಲ್ಲೆ................ ತಾಲ್ಲೂಕು ......................ಗ್ರಾಮದಲ್ಲಿ .................ವಾಸವಾಗಿರುವ ಇವರು ಒಂದನೇ ತರಗತಿಯಿಂದ ..........ತರಗತಿಯವರೆಗೆ ................ಜಿಲ್ಲೆ ...............ತಾಲ್ಲೂಕು .............ಪಟ್ಟಣ ..........ಶಾಲೆಯಲ್ಲಿ ವ್ಯಾಸಂಗ ಮಾಡಿ ............ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿ ಒಂದು ದೊಡ್ಡ ನಗರ ಪ್ರದೇಶ ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು

| | |
|---|---|
| ಮೇಲು ರುಜು | ಸಹಿ |
| ಕ್ಷೇತ್ರ ಶಿಕ್ಷಣ ಅಧಿಕಾರಿ | ಮುಖ್ಯೋಪಾಧ್ಯಾಯರ ಸಹಿ |
| ಕಛೇರಿಯ ಮೊಹರು | ಮತ್ತು ಸಂಸ್ಥೆಯ ಮೊಹರು |

ಸ್ಥಳ:
ದಿನಾಂಕ:

**ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 44 ಸೆನೆನಿ 2001 ದಿನಾಂಕ: 27.07.2001**

**ನಮೂನೆ – 3**

**ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿ**

ಶ್ರೀ/ಶ್ರೀಮತಿ ........................................................ಎಂಬುವವರ ಮಗ / ಮಗಳು / ಪತಿ / ಪತ್ನಿ ಶ್ರೀ/ಶ್ರೀಮತಿ/ಕುಮಾರಿ ..............................ಜಿಲ್ಲೆ .....................ತಾಲ್ಲೂಕು ...............ಗ್ರಾಮದಲ್ಲಿ ......................ವಾಸವಾಗಿರುವ ಇವರು: ಇವರ ಕುಟುಂಬದವರ ಅವಲಂಬಿತರಾಗಿದ್ದ ಈ ಕೆಳಕಂಡ ಆಸ್ತಿಯನ್ನು ......................ಯೋಜನೆಗಾಗಿ ..................... ಇಸವಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ:–

(ಅ) * * ವಾಸಿಸುವ ಮನೆ ಮತ್ತು ತಾವು ಅವಲಂಬಿತರಾಗಿದ್ದ ಅವರ ಕೃಷಿ ಭೂಮಿಯ ಅರ್ಧದಷ್ಟು

(ಆ) * * ಯೋಜನೆಗೆ ಮೊದಲು ಭೂಮಿಯನ್ನು ಹೊಂದಿರದೆ: ಯೋಜನೆಯಿಂದ ತಾವು ವಾಸಿಸುವ ಮನೆ:

(ಇ) * * ತಾವು ಅವಲಂಬಿತರಾಗಿದ್ದ ತಮ್ಮ ಕೃಷಿ ಭೂಮಿಯ ಅರ್ಧದಷ್ಟು ಅಥವಾ ಅದಕ್ಕಿಂತ ಕಡಿಮೆ ಕೃಷಿಭೂಮಿ:

(ಈ) * * ಇತರ ಇನ್ಯಾವುದೇ ಪ್ರಕರಣದಲ್ಲಿ ಯೋಜನೆಯಿಂದ ನಿರ್ವಸಿತರಾದವರು.

ಸ್ಥಳ:
ದಿನಾಂಕ:

ತಹಶೀಲ್ದಾರ್
ತಾಲ್ಲೂಕು ಕಛೇರಿಯ ಮೊಹರು

**ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ**

ಶ್ರೀ/ಶ್ರೀಮತಿ ______ರವರ ಮಗ/ಮಗಳು/ಪತಿ/ ಪತ್ನಿ, ಶ್ರೀ/ಶ್ರೀಮತಿ/ಕುಮಾರಿ ಜಿಲ್ಲೆ_____ಜಿಲ್ಲೆ ತಾಲ್ಲೂಕು .........................ಗ್ರಾಮದಲ್ಲಿ ...................ವಾಸವಾಗಿರುವ ಇವರು.....ನೇ ತರಗತಿಯಿಂದ ..........ನೇ ತರಗತಿಯವರೆಗೆ .................ಶೈಕ್ಷಣಿಕ ವರ್ಷದಿಂದ ...............ಶೈಕ್ಷಣಿಕ ವರ್ಷದವರೆಗೆ ..............ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ:
ದಿನಾಂಕ:

ಮುಖ್ಯೋಪಾಧ್ಯಾಯರ ಸಹಿ ಮತ್ತು ಸಂಸ್ಥೆಯ ಮೊಹರು

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೆನೆನಿ 2005, ದಿನಾಂಕ: 19.11.2005

## CERTIFICATE FOR THE PERSONS WITH DISABILITIES

This is to certify that Sri/ Smt/ Kum ................................ ......................son /wife/daughter of Sri ..................................................................................... Age...............................old, male/ female, Registration No........................is a case of .............................He/She is physically disabled/visual disabled/speech and hearing disabled and has..........................% (...................percent) permanent (physical impairment visual impairment speech & hearing impairment) in relation of his/her............................................

**Note:**

1. This condition is progressive/ non-progressive/likely to improved/not likely to improve. *
2. Re-assessment is not recommended/is recommended after a period of ............................months/years. *

* Strike out which is not applicable

(Recent Attested
Photograph showing
the disability
affixed here)

| | | |
|---|---|---|
| Sd/-<br>(Doctor)<br>(Seal) | Sd/-<br>(Doctor)<br>(Seal) | Sd/-<br>(Doctor)<br>(Seal) |

Countersigned by the
Medical Superintendent CMO/Head
of Hospital (with seal)

Signature / Thumb impression
of the disabled person

## ANNEXURE-A
## ELIGIBILITY CERTIFICATE
## [Under Article 371(J)]
## [See rule 3(3)]

[The Karnataka Public Employment (Reservation in Appointment for Hyderabad-Karnataka Region Rules for Issual of Certificates,2013]

Sri./Smt______________ s/o/w/o________________ is a local person of the Village/Town ______________ of Taluka _________________of District ____________ of Karnataka State.

Place:__________
Date:___________

Name:____________
Assistant Commissioner
______________Sub Division
______________ District

ಅನುಬಂಧ-ಬಿ

# PHYSICAL FITNESS CERTIFICATE

Report of the Medical Officer:

Name of the Candidate : ______________________________ is age is according to his/her own statement ______________ year and by appearance about __________ years

Physical Examination :

1. General Development: Good Fair Poor
   Nutrition: Average Obese Thin
   Height (Without Shoes)
   Weight
   Change in weight (Recent loss of weight in Kgs)
   Temperature
2. Chest Measurement
   a) (After full inspiration)
   b) (After full expiration)
3. Skin:- Any obvious disease
4. Eyes:- Any disease
   i) Night Blindness
   ii) Defect in colour vision
   iii) Field of vision
   iv) Visual Actuity

| Acuity of vision | Naked Eye | With Glasses | Strength of Glasses | | |
|---|---|---|---|---|---|
| | | | Spn | Cyl | Akis |
| Near Vision | R.E | | | | |
| | L.E | | | | |
| Distant Vision | R.E | | | | |
| | L.E | | | | |

5. Ears : inspection Hearing Right Ear Left Ear
6. Glands Thyroid
7. Condition of Teeth
8. Respiratory System: Does physical Examination reveal anything abnormal in the respirator organs?
   If yes explain full:
9. Circulation System:
   a) Heart: Rate: Standing
   After hopping (25 times)
   2 Minutes after hopping
   Any organic lesions of the cardia
   b) Blood pressure: Systolic Distolic
10. Abdomen: Girth Tenderness Hernia

a) Palpable: Liver Speleen Kidneys Any Tumour
b) Haemorrhoids Pistuals

11. Nervous System: Indication of nervous or mental disabilities

12. Loco-Motor System: Any abnormality

13. Genito Urinary : Any evidence of Hydrocele, Varicocele etc.
Urine Analysis:
a) Physical appearance b) S.P Gravity c) Albumin
d) Sugar e) Casts f) Cells

14. Report of Screening/ X-Ray
Examination of chest abdomen

15. Is he are she Suffering from any other illness likely to render him unfit for the efficient discharge of his duties in the service for which he is a candidate?

I, do hereby certify that I have examined Sri/Smt.......................................................................... candidate applying for the post of Pourakarmika at BBMP and that I cannot discover that he/she has any disease, constitutional affliction or bodily infirmity except .................................................................................................................................................. ............................. I do not consider this as disqualification if selected for employment for the post of Pourakarmika at BBMP.

Date:

Place: (SIGNATURE WITH SEAL)

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಹಾನಗರ ಪಾಲಿಕೆ ಕಛೇರಿಗಳು, ನರಸಿಂಹರಾಜ ಚೌಕ, ಬೆಂಗಳೂರು-560002

## ಅಧಿಸೂಚನೆ

### ಪೌರಕಾರ್ಮಿಕರ ಹುದ್ದೆಗಳಿಗೆ ಆನ್‌ಲೈನ್ ಮುಖೇನ ಅರ್ಜಿ ಆಹ್ವಾನಿಸುವ ಬಗ್ಗೆ

**ಅಧಿಸೂಚನೆ ಸಂಖ್ಯೆ: ಸ.ಆ.ನೇ/ಪಿಆರ್/54/2015-16** **ದಿನಾಂಕ:27-08-2019**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣೆ ಹಾಗೂ ವಿವಿಧ ಸ್ವಚ್ಛತಾ ಕಾರ್ಯಗಳ ನಿರ್ವಹಣೆಗಾಗಿ ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಖಾಲಿ ಇರುವ **ಗ್ರೂಪ್ "ಡಿ"** ವೃಂದದ 4000 ಪೌರಕಾರ್ಮಿಕರ ಹುದ್ದೆಗಳನ್ನು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 536 ಎಂಎನ್‌ವೈ 2014, ಬೆಂಗಳೂರು, ದಿನಾಂಕ:01-02-2018ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಪೌರಕಾರ್ಮಿಕರ ನೇಮಕಾತಿ)(ವಿಶೇಷ) ನಿಯಮಗಳು 2017 ರನ್ವಯ ಭರ್ತಿ ಮಾಡುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿರಂತರವಾಗಿ ಕನಿಷ್ಠ 02 ವರ್ಷ ಸೇವೆ ಸಲ್ಲಿಸಿ, ಸೇವೆಯಲ್ಲಿ ಮುಂದುವರೆಯುತ್ತಿರುವ ಎನ್.ಎಂ.ಆರ್ / ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಇತರರು ಅರ್ಹ ಅಭ್ಯರ್ಥಿಗಳಿಂದ ಪಾಲಿಕೆಯ ಅಧಿಕೃತ ವೆಬ್‌ಸೈಟ್/ ಜಾಲತಾಣ www.bbmp.gov.in ಮುಖೇನ ಅಂತರ್ಜಾಲದ (ಆನ್‌ಲೈನ್) ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಇಲಾಖೆ ಮತ್ತು ಹುದ್ದೆಯ ಪದನಾಮ | ಸ್ಥಳೀಯ ವೃಂದದ – ಹುದ್ದೆಗಳು ಹೈದರಾಬಾದ್-ಕರ್ನಾಟಕ |
|---|---|---|
| 01 | ಬಿಬಿಎಂಪಿಯ ಘನತ್ಯಾಜ್ಯ ನಿರ್ವಹಣೆ ವಿಭಾಗ – ಪೌರಕಾರ್ಮಿಕರು 'ಡಿ' ಗ್ರೂಪ್ | **490** |

**ಹೈದ್ರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ವರ್ಗೀಕೃತ ಮೀಸಲಾತಿ ಅನ್ವಯಿಸಲಾಗುವ ಹುದ್ದೆಗಳು**

| ಕ್ರ.ಸ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವರ್ಗೀಕರಣ | | | | | | | | | ವೇತನ ಶ್ರೇಣಿ |
|---|---|---|---|---|---|---|---|---|---|---|---|---|
| | | | | ಪ.ಜಾ (15%) | ಪ.ಪಂ (3%) | ಪ್ರ-1 (4%) | ಪ್ರ 2ಎ (15%) | ಪ್ರ 2ಬಿ (4%) | ಪ್ರ 3ಎ (4%) | ಪ್ರ 3ಬಿ (5%) | ಸಾ.ಅ (50%) | |
| 01 | ಪೌರಕಾರ್ಮಿಕರು | **490** | ಇತರೆ | 15 | 03 | 04 | 15 | 04 | 04 | 05 | 49 | **17000-28950** |
| | | | ಮಹಿಳೆ | 22 | 05 | 06 | 22 | 06 | 06 | 07 | 74 | |
| | | | ಗ್ರಾಮೀಣ | 19 | 04 | 05 | 19 | 05 | 05 | 06 | 61 | |
| | | | ಅಂಗವಿಕಲ | 04 | 01 | 01 | 04 | 01 | 01 | 02 | 13 | |
| | | | ಮಾ.ಸೈ | 07 | 01 | 02 | 07 | 02 | 01 | 02 | 24 | |
| | | | ಕ.ಮಾ.ಅ | 04 | **01** | 01 | 03 | 01 | 01 | 01 | 12 | |
| | | | ಯೋ.ನಿರಾ | 03 | **00** | 01 | 03 | 01 | 01 | 01 | 12 | |
| | | | ಒಟ್ಟು | **74** | **15** | **20** | **73** | **20** | **19** | **24** | **245** | |

ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ:09-09-2019.

- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:09-10-2019 (ರಾತ್ರಿ 11-45 ಘಂಟೆಯೊಳಗೆ)
- **ಆನ್‌ಲೈನ್ ಅರ್ಜಿ** ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ:09-10-2019(ಬ್ಯಾಂಕ್ ಕಾರ್ಯದ ವೇಳೆಯೊಳಗೆ/Debit card/ Credit card / Netbanking ಮೂಲಕ ಶುಲ್ಕ ಪಾವತಿಗೆ ರಾತ್ರಿ 11.45 ಗಂಟೆಯೊಳಗೆ)
- ಯಾವುದೇ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಬಾರಿ ಅರ್ಜಿ ಸಲ್ಲಿಸಿದಲ್ಲಿ, ಒಂದು ಅರ್ಜಿಯನ್ನು ಪರಿಗಣಿಸಿ ಉಳಿದಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೇ ತಿರಸ್ಕರಿಸಲಾಗುವುದು.
- ಅರ್ಜಿಗಳನ್ನು ಆನ್-ಲೈನ್ (ON-LINE) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಕಡ್ಡಾಯವಾಗಿ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ / ಅಂಚೆ / ಇತರೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು Online ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿಕೊಳ್ಳತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯವೇ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದಲ್ಲದೇ ಅಂತಹವರ ವಿರುದ್ಧ ಪಾಲಿಕೆಯು ಕಾನೂನಿನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.

**ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು.**

| | | | |
|---|---|---|---|
| ಸಾ.ಅ | ಸಾಮಾನ್ಯ ಅರ್ಹತೆ | GM | General Merit |
| ಪ.ಜಾ | ಪರಿಶಿಷ್ಟ ಜಾತಿ | SC | Scheduled Caste |
| ಪ.ಪಂ | ಪರಿಶಿಷ್ಟ ಪಂಗಡ | ST | Scheduled Tribe |
| ಪ್ರ-1 | ಪ್ರವರ್ಗ-1 | CAT-1 | Category – 1 |
| 2ಎ | ಪ್ರವರ್ಗ-2ಎ | 2A | Category – 2A |
| 2ಬಿ | ಪ್ರವರ್ಗ-2ಬಿ | 2B | Category – 2B |
| 3ಎ | ಪ್ರವರ್ಗ-3ಎ | 3A | Category – 3A |
| 3ಬಿ | ಪ್ರವರ್ಗ-3ಬಿ | 3B | Category – 3B |
| ಮಾ.ಸೈ | ಮಾಜಿ ಸೈನಿಕ | Ex-MP | Ex-Military Person |
| ಗ್ರಾಮೀಣ | ಗ್ರಾಮೀಣ ಅಭ್ಯರ್ಥಿ | Rural | Rural Candidate |
| ಕ.ಮಾ.ಅ | ಕನ್ನಡ ಮಾಧ್ಯಮ ಅಭ್ಯರ್ಥಿ | KMS | Kannada Medium Studied Candidate |
| ಅಂ.ವಿ | ಅಂಗವಿಕಲ | PH | Physically Handicapped Person |
| ಯೋ.ನಿ.ಅ | ಯೋಜನೆಯಿಂದ ನಿರಾಶ್ರಿತ ಅಭ್ಯರ್ಥಿ | PDP | Project Displaced Person |
| ಹೈ.ಕ | ಹೈದ್ರಾಬಾದ್-ಕರ್ನಾಟಕ | HK | Hyderabad Karnataka |

## 2. ಶುಲ್ಕ:- Online Recruitment Process

| | |
|---|---|
| ಪ.ಜಾತಿ / ಪ.ಪಂಗಡ, ಪ್ರವರ್ಗ-1 | ರೂ.100/-ಗಳು |
| ಇತರರಿಗೆ | ರೂ.200/-ಗಳು |
| ವಿಕಲ ಚೇತನರು (PH) ಮತ್ತು ಮಾ.ಸೈ | ಶುಲ್ಕ ವಿನಾಯಿತಿ |

2(1) ಅರ್ಜಿಗಳನ್ನು Online ಮೂಲಕ ಭರ್ತಿ ಮಾಡಿ ನಿಗದಿತ ಶುಲ್ಕವನ್ನು ಅಂಚೆ ಕಛೇರಿಯ ಕೆಲಸ ವೇಳೆಯೊಳಗೆ ಬೆಂಗಳೂರು ನಗರದ ಯಾವುದೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖಾ ಕಛೇರಿಗಳಲ್ಲಿ ಪಾವತಿಸಬಹುದು. ಅಲ್ಲದೇ ಆನ್ ಪೇಮೆಂಟ್ ಮಾಡುವವರು ರಾತ್ರಿ 11.45 ಗಂಟೆಯೊಳಗಾಗಿ (Debit card/ Credit card/ Netbanking) ಮೂಲಕ ಶುಲ್ಕ ಪಾವತಿ ಮಾಡಬಹುದು. ಇದನ್ನು ಹೊರತುಪಡಿಸಿ ಬೇರೆ ಯಾವುದೇ ಮಾದರಿಯ ಶುಲ್ಕ ಪಾವತಿಯನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಒಮ್ಮೆ ಅರ್ಜಿ ಶುಲ್ಕ ಪಾವತಿಸಿದ ನಂತರ ಯಾವುದೇ

ಸಂದರ್ಭದಲ್ಲಿಯೂ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಇತರೆ ನೇಮಕಾತಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.

**ವಿಶೇಷ ಸೂಚನೆ:**

- ಅಭ್ಯರ್ಥಿಗಳು Online ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳುವುದು.
- Online ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ ಮತ್ತು ಇ-ಮೇಲ್ ಮೂಲಕ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5-30 ಗಂಟೆಯವರೆಗೆ ಅಥವಾ ಅರ್ಜಿಯಲ್ಲಿ ನೀಡಿರುವ ಇ-ಮೇಲ್ ಸಹಾಯದ ಮೂಲಕ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.
- ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಉಪ ವಿಭಾಗದ ಕಛೇರಿಯಲ್ಲಿ ಒಬ್ಬ ನೋಡಲ್ ಅಧಿಕಾರಿಯೊಂದಿಗೆ ಸಹಾಯವಾಣಿ ಕೇಂದ್ರ ತೆರೆಯಲಾಗಿರುತ್ತದೆ.

**3. ಅರ್ಹತಾ ಷರತ್ತುಗಳು:-**

**ಎ)** 1) ಭಾರತೀಯ ನಾಗರೀಕನಾಗಿರತಕ್ಕದ್ದು.

2) 45 ವರ್ಷ ವಯಸ್ಸಿನ ಒಳಗಿನವರಾಗಿರಬೇಕು

3) ಬಿಬಿಎಂಪಿ ಯಲ್ಲಿ ದಿನಾಂಕ:01-02-2018ಕ್ಕೆ 02 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಹಾಗೂ ಸೇವೆಯಲ್ಲಿ ಮುಂದುವರೆಯುತ್ತಿರುವ ಎನ್.ಎಂ.ಆರ್/ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ/ಇತರರು ಆದ್ಯತೆ ನೀಡಲಾಗುವುದು. (ESI ಮತ್ತು PF ಸೌಲಭ್ಯವನ್ನು ಹೊಂದಿರಬೇಕು)

4) ದೈಹಿಕ ದೃಢತೆ ಇರಲೇತಕ್ಕದ್ದು.(ಸರ್ಕಾರಿ ವೈದ್ಯರಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸಬೇಕು)(ವಿಕಲ ಚೇತನರಿಗೆ (PH) ಹೊರತುಪಡಿಸಿ)

5) ಕನ್ನಡ ಭಾಷೆ ಮಾತನಾಡುವ ಬಗ್ಗೆ ಜ್ಞಾನವಿರಬೇಕು. (ಕನ್ನಡ ಜ್ಞಾನದ ಬಗ್ಗೆ ಸ್ವಯಂ ಘೋಷಣಾ ಪತ್ರ ಲಗತ್ತಿಸಬೇಕು)

6) ಈ ಹುದ್ದೆಗೆ ಯಾವುದೇ ಶೈಕ್ಷಣಿಕ ವಿದ್ಯಾರ್ಹತೆ ಅಗತ್ಯವಿರುವುದಿಲ್ಲ.

**ಬಿ) ಅನರ್ಹತೆ ವಿಧಾನ :-**

1) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗುವುದಿಲ್ಲ.

2) ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರಬಾರದು

3) ಈಗಾಗಲೇ ಗಂಭೀರ ಪ್ರಕರಣದ ಕಾರಣ ಸೇವೆಯಿಂದ ತೆಗೆದುಹಾಕಿರಬಾರದು.

**4. ನೇಮಕಾತಿ ವಿಧಾನ:-**

1. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 536 ಎಂಎನ್‌ವೈ 2014, ಬೆಂಗಳೂರು, ದಿನಾಂಕ:01-02-2018ರ ನಿಯಮಗಳನ್ವಯ ನಿಯಮದ ಪ್ರಾರಂಭದ ದಿನಾಂಕಕ್ಕೆ ಮುಂಚೆ ಬಿಬಿಎಂಪಿಯಲ್ಲಿ 02 ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಮತ್ತು ಹಾಗೇ ಸೇವೆ ಸಲ್ಲಿಸಿ, ಕಾರ್ಯನಿರ್ವಹಿಸುತ್ತಿರುವುದನ್ನು ಮುಂದುವರೆಸುತ್ತಿರುವ ಎನ್.ಎಂ.ಆರ್ /ದಿನಗೂಲಿ /ಗುತ್ತಿಗೆ/ಹೊರಗುತ್ತಿಗೆ /ಇತರ ಪೌರಕಾರ್ಮಿಕ ವ್ಯಕ್ತಿಗಳಿಗೆ ಆದ್ಯತೆ ನೀಡಲಾಗುವುದು.
2. ಹೆಚ್ಚು ಸಂಖ್ಯೆಯ ವರ್ಷಗಳು ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗೆ ಕಡಿಮೆ ಸಂಖ್ಯೆಯ ವರ್ಷಗಳು ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಿಂತ ಆದ್ಯತೆ ನೀಡಲಾಗುವುದು.
3. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಪೈಕಿ ಹೆಚ್ಚು ವಯಸ್ಸಾದ ವ್ಯಕ್ತಿಯನ್ನು ಕಡಿಮೆ ವಯಸ್ಸಾದ ವ್ಯಕ್ತಿಗಿಂತ ಹಿರಿಯನೆಂದು ಪರಿಗಣಿಸುವ ಮೂಲಕ ವಯಸ್ಸಿನ ಆಧಾರದ ಮೇರೆಗೆ ಆಯ್ಕೆ ಪಟ್ಟಿ ತಯಾರಿಸಲಾಗುವುದು.
4. ಹೊರಗುತ್ತಿಗೆ ಪೌರಕಾರ್ಮಿಕರನ್ನು ಪರಿಗಣಿಸುವುದಕ್ಕಾಗಿ ಬಿಬಿಎಂಪಿ ಏಜೆನ್ಸಿಯು ದಿನಾಂಕ:01-02-2018 ಕ್ಕಿಂತ ಮುಂಚೆ ಕನಿಷ್ಠ 02 ವರ್ಷಗಳು ಕಾರ್ಯನಿರ್ವಹಿಸಿರುವ ಮತ್ತು ಭವಿಷ್ಯ ನಿಧಿ, ಇ.ಎಸ್.ಐ ಮತ್ತು ಸಂಬಳ ನೀಡಿರುವುದು ಮುಂತಾದವುಗಳ ಕುರಿತು ಸಾಕ್ಷ್ಯ ದಾಖಲೆಗಳನ್ನು ಪರಿಗಣಿಸಲಾಗುವುದು.

5. ಎನ್.ಎಂ.ಆರ್/ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ/ಇತರರಿಗೆ ಬಿಬಿಎಂಪಿ ನಿಧಿಯಿಂದ ದಿನಾಂಕ:01-02-2018 ಕ್ಕಿಂತ ಮುಂಚೆ ಕನಿಷ್ಠ 02 ವರ್ಷಗಳು ಕಾರ್ಯನಿರ್ವಹಿಸಿರುವ ಮತ್ತು ಕೂಲಿಯನ್ನು ಪಾವತಿಸಿರುವ ದಾಖಲೆಯನ್ನು ಪರಿಗಣಿಸಲಾಗುವುದು.
6. ಇಬ್ಬರು ಮತ್ತು ಹೆಚ್ಚಿನ ಅಭ್ಯರ್ಥಿಗಳ ಸೇವಾ ಅವಧಿಯು ಸಮನಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಸಂಬಂಧದಲ್ಲಿ ಆದ್ಯತಾ ಕ್ರಮವನ್ನು ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಲಾಗುವುದು, ಅಭ್ಯರ್ಥಿಗಳ ಜನ್ಮ ದಿನಾಂಕ ಮತ್ತು ಸೇವೆಯ ದಿನಾಂಕ ಒಂದೇ ಆಗಿದ್ದಲ್ಲಿ ಲಾಟರಿ ಮೂಲಕ ಆಯ್ಕೆ ಮಾಡಲಾಗುವುದು.

## 5. ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯೋಮಿತಿ:-

(ಅ) ಶೈಕ್ಷಣಿಕ ವಿದ್ಯಾರ್ಹತೆ ಅಗತ್ಯವಿರುವುದಿಲ್ಲ

(ಆ) ಕನ್ನಡ ಭಾಷೆ ಮಾತನಾಡುವ ಬಗ್ಗೆ ಜ್ಞಾನವಿರಬೇಕು. (ಕನ್ನಡ ಜ್ಞಾನದ ಬಗ್ಗೆ ಸ್ವಯಂ ಘೋಷಣಾ ಪತ್ರ ಲಗತ್ತಿಸಬೇಕು)

(ಇ) ಗರಿಷ್ಠ ವಯೋಮಿತಿ 45 ವರ್ಷಗಳನ್ನು ಮೀರತಕ್ಕದ್ದಲ್ಲ. (ಕಡ್ಡಾಯವಾಗಿ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಮತ್ತು ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯಲ್ಲಿ ESI, PF ನಲ್ಲಿ ನಮೂದಿಸಿರುವ ಜನ್ಮದಿನಾಂಕ ದಾಖಲೆಯನ್ನು ಪರಿಗಣಿಸಲಾಗುವುದು.)

## 6. ಮೀಸಲಾತಿ ಪ್ರಮಾಣ ಪತ್ರಗಳು:

ಜಾತಿ ಮೀಸಲಾತಿ ಕೋರಬಯಸುವ

- ಪ.ಜಾ/ಪ.ಪಂ ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ
- ಪ್ರವರ್ಗ-1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಹಾಗೂ
- 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ಸಂಬಂಧಿತ ತಹಶೀಲ್ದಾರರವರಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದೊಳಗಾಗಿ ಪ್ರಮಾಣ ಪತ್ರವನ್ನು ಪಡೆದಿರಬೇಕು. ಈ ಹುದ್ದೆಗಳಿಗಾಗಿ ಆಯ್ಕೆ ಹೊಂದುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಜಾತಿ ಮೀಸಲಾತಿ ಪ್ರಮಾಣ ಪತ್ರಗಳನ್ನು ಆಯಾ ನೇಮಕಾತಿ ಪ್ರಾಧಿಕಾರದವರು ಅವುಗಳ ಸಿಂಧುತ್ವದ ಪರಿಶೀಲನೆಗೆ ಒಳಪಟ್ಟಂತೆ ನೇಮಕಾತಿಗೆ ಬದ್ಧರಾಗಿತ್ತಾರೆ. ಅಧಿಸೂಚನೆಯ ಕೊನೆಯಲ್ಲಿ ಪ್ರಮಾಣ ಪತ್ರಗಳ ನಮೂನೆಯನ್ನು ನೀಡಲಾಗಿರುತ್ತದೆ.

## 7. ಮಾಜಿ ಸೈನಿಕ:

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್ಆರ್ಆರ್ 92 ದಿನಾಂಕ01-04-1992 ಮತ್ತು ಅಧಿಸೂಚನೆ ಸಂಖ್ಯೆ ಡಿಪಿಎಆರ್ 28 ಎಸ್ಆರ್ಆರ್ 95 ದಿನಾಂಕ 21-10-1995 ರನ್ವಯ ನೇರ ನೇಮಕಾತಿಗಳಲ್ಲಿ ಶೇಕಡ 10 ರಷ್ಟು ಹುದ್ದೆಗಳನ್ನು ಮಾಜಿ ಸೈನಿಕರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರಲ್ಲಿದ್ದಂತೆ ಮಾಜಿ ಸೈನಿಕರ ವಿವರಣೆ ಕೆಳಕಂಡಂತಿದೆ:

1) ಮಾಜಿ ಸೈನಿಕ ಎಂದರೆ ಕೇಂದ್ರ ಸಶಸ್ತ್ರ ದಳಗಳಾದ ನಿಯಮಿತಿ ಭೂದಳ, ನೌಕಾದಳ ಮತ್ತು ವಾಯು ದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ ಆದರೆ ಡಿಫೆನ್ಸ್, ಸೆಕ್ಯೂರಿಟಿ ಕೋರ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ ಮತ್ತು
2) ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುತ್ತಿರುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ಅಂಗವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

ಅ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

ಅಥವಾ

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಅಂತಹ ಸೇವೆಯಿಂದ ಬಿಡುಗಡೆಯಾದವರು.

ಅಥವಾ

(ಇ)ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

(ಈ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದುಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು:–

1. ನಿರಂತರ ಸೇವೆ ಸಲ್ಲಿಸಿದ ನಿವೃತ್ತಿ ಹೊಂದಿದ ಪಿಂಚಣಿದಾರರು
2. ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
3. ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

## 8. ಗ್ರಾಮೀಣ ಅಭ್ಯರ್ಥಿ

ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ (ಅಭ್ಯರ್ಥಿಯು ಮೀಸಲಾತಿ ಕೋರಿದ್ದಲ್ಲಿ) ನಿಗದಿತ ನಮೂನೆ-2 ರಲ್ಲಿ ಪ್ರಮಾಣಪತ್ರವನ್ನು ಲಗತ್ತಿಸಿರಬೇಕು.

## 9. ಕನ್ನಡ ಮಾಧ್ಯಮ ಅಭ್ಯರ್ಥಿ

ಕನ್ನಡ ಮಾಧ್ಯಮ ವ್ಯಾಸಂಗ ಮಾಡಿದ್ದಲ್ಲಿ ಪ್ರಮಾಣ ಪತ್ರ (ಅಭ್ಯರ್ಥಿಯು ಮೀಸಲಾತಿ ಕೋರಿದ್ದಲ್ಲಿ) ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರವನ್ನು ಲಗತ್ತಿಸಿರಬೇಕು. ಕನ್ನಡ ಮಾತನಾಡುವ ಜ್ಞಾನವಿರುವ ಬಗ್ಗೆ ನೋಟರಿಯವರ ಮುಂದೆ ಪ್ರಮಾಣೀಕರಿಸಿರುವ ಪ್ರಮಾಣ ಪತ್ರ ಕಡ್ಡಾಯವಾಗಿ ಲಗತ್ತಿಸಿರಬೇಕು. ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ.

## 10. ಅಂಗವಿಕಲ ಅಭ್ಯರ್ಥಿಗಳು:

**ಅಂಗವಿಕಲ ಅಭ್ಯರ್ಥಿ ಎಂದರೆ:**

(ಅ) ಕಣ್ಣಿನ ದೃಷ್ಟಿಯನ್ನು ಸರಿಪಡಿಸುವ ಕನ್ನಡಕವನ್ನು ಹಾಕಿದಾಗ ಎರಡೂ ಕಣ್ಣಿನ ಪೈಕಿ ಉತ್ತಮವಾದ ಕಣ್ಣಿನಲ್ಲಿ 6:60 ಅಥವಾ 20:2000 (ಸ್ನೆಲನ್) ಅನ್ನು ಮೀರದಿರುವ ದೃಷ್ಟಿ ಸಾಮರ್ಥ್ಯ ಇರುವ ವ್ಯಕ್ತಿ.

(ಆ) 20 ಡಿಗ್ರಿಗಳು ಅಥವಾ ಅದಕ್ಕೂ ಕಡಿಮೆಯ ಕೋನದವರೆಗೆ ವಿಸ್ತರಿಸುವ ದೃಷ್ಟಿ ಕ್ಷೇತ್ರದ ಪರಿಮಿತಿಯನ್ನು ಹೊಂದಿರುವ ವ್ಯಕ್ತಿ.

(ಇ) ಸಂಪೂರ್ಣವಾಗಿ ದೃಷ್ಟಿ ಸಾಮರ್ಥ್ಯವನ್ನು ಕಳೆದುಕೊಂಡಿದ್ದವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

(ಈ)ಎಲ್ಲಾ ಸಂದರ್ಭಗಳಲ್ಲಿ ಜೋರಾಗಿ ಮಾತನಾಡುವುದು ಕೇಳಿಸುವ ಅಥವಾ ಅರ್ಥವಾಗದ ಅಥವಾ ಎರಡೂ ಕಿವಿಗಳ ಪೈಕಿ ಉತ್ತಮವಾದ ಕಿವಿಯ ಶ್ರವಣ ಶಕ್ತಿಯು 90 ಡೆಸಿಬಲ್‌ಗಳಿಗೂ ಹೆಚ್ಚು ತಗ್ಗಿರುವ (ಅತ್ಯಂತ ಕಡಿಮೆ ಶ್ರವಣ ಶಕ್ತಿಯ) ಅಥವಾ ಎರಡೂ ಕಿವಿಗಳು ಶ್ರವಣ ಶಕ್ತಿಯನ್ನು ಕಳೆದುಕೊಂಡಿರುವ ವ್ಯಕ್ತಿ ಅಥವಾ ಜೀವನದ ಸಾಮಾನ್ಯ ಉದ್ದೇಶಗಳ ಸಂಬಂಧದಲ್ಲಿ ಶ್ರವಣೇಂದ್ರೀಯ ನಿಷ್ಕ್ರಿಯವಾಗಿದ್ದರೆ ಅಂತಹ ಅಭ್ಯರ್ಥಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

(ಉ)ಮೂಳೆಗಳು, ಮಾಂಸಖಂಡಗಳು ಮತ್ತು ಕೀಲುಗಳು ವಾಡಿಕೆಯ ಕಾರ್ಯನಿರ್ವಹಣೆಗೆ ಅಡಚಣೆಯಾಗುವಂತಹ ದೈಹಿಕ ದೋಷ ಅಥವಾ ವಿಕಲತೆ ಹೊಂದಿರುವ ವ್ಯಕ್ತಿಗಳು ಅರ್ಹರಾಗಿರುವುದಿಲ್ಲ.

(ಊ)ರಾಜ್ಯದ ಸರ್ಕಾರಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿರುವ ವೈದ್ಯರು ಅಂಗವಿಕಲರಿಗೆ ವೈದ್ಯಕೀಯಪ್ರಮಾಣ ಪತ್ರವನ್ನು ನೀಡಲು ಅಧಿಕಾರ ಹೊಂದಿದವರಾಗಿರುತ್ತಾರೆ.

(ಋ)ದೈಹಿಕ ಅಂಗವಿಕಲತೆ ಒಳಪಡುವ ಅಭ್ಯರ್ಥಿಗಳು ಮೂಳೆ ತಜ್ಞ (ಆರ್ಥೋಪೆಡಿಕ್ ಸರ್ಜನ್) ರಿಂದ ದೈಹಿಕ ಅಂಗವಿಕಲತೆಯ ಮೌಲೀಕರಣವನ್ನು ಅಲ್ಮಿಕೊ ಕಾನ್‌ಪುರ್ (ಡಬ್ಲ್ಯೂ.ಎಚ್.ಒ. ಸ್ಟ್ಯಾಂಡರ್ಡ್)

ಇದರ ಆಧಾರದ ಮೇಲೆ ಮಾಡಿಸುವುದು ಕಡ್ಡಾಯವಾಗಿರುತ್ತದೆ.

**ಸರ್ಕಾರದ ಆದೇಶ ಸಂಖ್ಯೆ:** ಸಿಆಸುಇ 115 ಸೆನೆನಿ 2005 ದಿ:19-11-2005 ರಲ್ಲಿ ನಿಗದಿಪಡಿಸಿರುವ ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಕ್ಷಮ ವೈದ್ಯಾಧಿಕಾರಿಗಳಿಂದ ಪಡೆದಿರಬೇಕು ಮತ್ತು ಅಂಗವಿಕಲತೆ ಪ್ರಮಾಣವು ಶೇ.40 ರಿಂದ 75 ಕ್ಕಿಂತ ಹೆಚ್ಚಾಗಿರಬಾರದು. ಸರ್ಕಾರದ ಆದೇಶ ಸಂಖ್ಯೆ:- ಸಿಆಸುಇ 48 ಸೆನೆನಿ 2012 ದಿ:10/06/2013 ರಲ್ಲಿ ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರನ್ನು 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿ ಅದರಲ್ಲಿ **4, 24** ನೇ ಬಿಂದುಗಳನ್ನು ದೃಷ್ಟಿ ಮಾಂದ್ಯತೆಯುಳ್ಳವರಿಗೆ, **44** ನೇ ಬಿಂದುವನ್ನು ಶ್ರವಣ ದೋಷವುಳ್ಳವರಿಗೆ, **64**ನೇ ಬಿಂದುವನ್ನು ಚಲನವಲನ ವೈಕಲ್ಯ ಇರುವವರಿಗೆ ಮತ್ತು 84 ನೇ ಬಿಂದುವನ್ನು ಕುಷ್ಠ ರೋಗದಿಂದ ಗುಣಮುಖರಾದ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. ಸಮತಳ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರತಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳನ್ನು ಮೀಸಲಿಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:**WCD 348 PHP 2015, Bengaluru, dtd:16-06-2016** ರಂತೆ ಅಂಗವಿಕಲ ಅಭ್ಯರ್ಥಿಗಳಿಗೆ ಹುದ್ದೆಗಳನ್ನು ನಿರ್ದಿಷ್ಟಪಡಿಸಲಾಗಿದೆ. ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಅಂಗವಿಕಲ ಮೀಸಲಾತಿಯನ್ನು ರದ್ದುಪಡಿಸಲಾಗುವುದು. **ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ**. (ಈ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ)

## 11. ಯೋಜನೆ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳು :

ಸರ್ಕಾರಿ ಆದೇಶ ಸಂಖ್ಯೆ; ಸಿಆಸುಇ 71 ಸೆನೆನಿ 2001 ದಿನಾಂಕ: 24-10-2002 ರನ್ವಯ ಶೇ.5% ರಷ್ಟು ಹುದ್ದೆಗಳನ್ನು ಯೋಜನಾ ನಿರಾಶ್ರಿತರ ಗುಂಪಿಗೆ ಮೀಸಲಿರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ; ಸಿಆಸುಇ 23 ಸೆನೆನಿ 99 ದಿನಾಂಕ: 23-11-2000 ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಅದರೆ ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬ ಅಭ್ಯರ್ಥಿಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರ್‌ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ)

## 12. ಅನುಚ್ಛೇದ 371(ಜೆ)ರನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ (ಹೈದರಾಬಾದ್-ಕರ್ನಾಟಕ) ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರದ ಅಧಿಸೂಚನೆ-II ಸಂಖ್ಯೆ: ಡಿಪಿಎಆರ್ 43 ಹೆಚ್‌ಕೆಸಿ 2013, ದಿನಾಂಕ:29-01-2014ರ ಅನುಬಂಧ-ಎ ರಲ್ಲಿ (3)(3)ನೇ ನಿಯಮ) ಸೂಚಿಸಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಆಯುಕ್ತರ ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು. ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದಾಗ ಇದರ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸಬೇಕು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುತ್ತದೆ. ಈ ಪ್ರಮಾಣ ಪತ್ರಗಳ ನಮೂನೆಯನ್ನು ಅನುಬಂಧ-1ರಲ್ಲಿ ತೋರಿಸಲಾಗಿದೆ. ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಯಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು.

ಎ(1) **ಸರ್ಕಾರಿ ಸೇವೆಯಲ್ಲಿರುವ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ:**

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ (ಹೈದರಾಬಾದ್-ಕರ್ನಾಟಕ) ಮೀಸಲಾತಿಯನ್ನು ಕೋರುವ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಸೇವಾ ಪುಸ್ತಕದಲ್ಲಿ ದಿನಾಂಕ:01-01-2013ಕ್ಕಿಂತ ಮುಂಚಿನ ನಮೂದಿನಲ್ಲಿ ಅವರ ಸ್ವಂತ ಊರು ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆ ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಯಾದಗಿರಿ ಕಂದಾಯ ಜಿಲ್ಲೆಯ ಅಡಿಯಲ್ಲಿ ಬರುವಂತಹ ಪ್ರದೇಶದ ನಮೂದು ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳು ತಮ್ಮ ಕಛೇರಿ ಮುಖ್ಯಸ್ಥರಿಂದ (ನೇಮಕಾತಿ ಪ್ರಾಧಿಕಾರ) ಸರ್ಕಾರದ ಅಧಿಸೂಚನೆ-ಸಂಖ್ಯೆ:ಡಿಪಿಎಆರ್ 43 ಹೆಚ್‌ಕೆಸಿ 2013, ದಿನಾಂಕ:29-01-2014ರ ಅನುಬಂಧ-ಎ ರಲ್ಲಿ (5(2)ನೇ ನಿಯಮ) ಸೂಚಿಸಿರುವ ನಮೂನೆಯಲ್ಲಿಯೇ ಸ್ವ-ಗ್ರಾಮ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು. ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದಾಗ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಜಾರಿಯಾಗಿರುವ ಮೀಸಲಾತಿ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುತ್ತದೆ. ಈ ಪ್ರಮಾಣ ಪತ್ರಗಳ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ. ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಯಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು.

**13. ಪಾಲಿಕೆಯೊಂದಿಗೆ ಪತ್ರ ವ್ಯವಹಾರ:**

ಪಾಲಿಕೆಯು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದುದರಿಂದ ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವಾಗ ಜಾಗರೂಕತೆಯಿಂದ ಭರ್ತಿ ಮಾಡತಕ್ಕದ್ದು.

ಪಾಲಿಕೆಯ ಎಲ್ಲಾ ವಲಯ ಕಛೇರಿಯಲ್ಲಿ ಒಬ್ಬ ನೋಡಲ್ ಅಧಿಕಾರಿಯೊಂದಿಗೆ ಸಹಾಯವಾಣಿ ಕೇಂದ್ರ ತೆರೆಯಲಾಗಿರುತ್ತದೆ.

**14. <u>ಪ್ರಾಮುಖ್ಯವಾದ ಸೂಚನೆಗಳು:</u>**

**ಎ)** 1) ವೃಂದ/ ಹುದ್ದೆ ಬದಲಾವಣೆಗೆ ಸೇವಾ ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ. (ಅಂದರೆ ಪೌರಕಾರ್ಮಿಕ ಹುದ್ದೆಯಿಂದ ಇತರೆ ಗೂಪ್-ಡಿ / ಸಮನಾಂತರ ಹುದ್ದೆಗಳಿಗೆ ಬದಲಾವಣೆಗೊಳ್ಳಲು ಅವಕಾಶವಿರುವುದಿಲ್ಲ.

2) ಸದರಿ ಹುದ್ದೆಗಳಿಗೆ ಯಾವುದೇ ಸಂದರ್ಶನ ನಿಗದಿಪಡಿಸಿರುವುದಿಲ್ಲ.

**ಬಿ) ದಾಖಲಾತಿ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವ ಪ್ರಮಾಣ ಪತ್ರಗಳು**

1. ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ದಾಖಲೆಗಳನ್ನು ಅರ್ಜಿ ಸಲ್ಲಿಕೆಗೆ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು ಹಾಗೂ ಮೂಲ ದಾಖಲೆಗಳನ್ನು ದಾಖಲಾತಿ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.
2. ಅಭ್ಯರ್ಥಿಯು ದೈಹಿಕವಾಗಿ ಆರೋಗ್ಯವಂತ ಮತ್ತು ಸದೃಡಕಾಯರಾಗಿರುವ ಬಗ್ಗೆ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಸರ್ಕಾರಿ ಆಸ್ಪತ್ರೆಯ ಸಕ್ಷಮ ಪ್ರಾಧಿಕಾರದಿಂದ ಪಡೆದ ದೈಹಿಕ ದೃಢತೆಯ ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದುಕೊಂಡು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
3. ಪಿ.ಎಫ್ ಹಾಗೂ ಇ.ಎಸ್.ಐ ಖಾತೆ/ಬ್ಯಾಂಕ್ ಖಾತೆ/ ಪಾಲಿಕೆಯಿಂದ ಪಡೆದ ವೇತನ/ದಿನಗೂಲಿ/ಪ್ರಮಾಣ ಪತ್ರಗಳ ಅದರ ಪ್ರತಿಯನ್ನು ಕಡ್ಡಾಯವಾಗಿ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
4. ಆಧಾರ್ ಕಾರ್ಡ್ ದಾಖಲೆ ಪ್ರತಿಗಳನ್ನು ಕಡ್ಡಾಯವಾಗಿ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
5. ಜನ್ಮ ದಿನಾಂಕಕ್ಕೆ ಸಂಬಂಧಿಸಿದಂತೆ ಜನನ ಪ್ರಮಾಣ ಪತ್ರ/ ಶಾಲಾ ದೃಢೀಕರಣ/ ಇತರೆ ದೃಢೀಕರಣಗಳ ಉದೃತ ಭಾಗದ ಮೂಲ ಪ್ರತಿಯನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
6. ಸೈನಿಕ ಸೇವೆಯಿಂದ ಬಿಡುಗಡೆಯಾದ ಪ್ರಮಾಣ ಪತ್ರ ಮತ್ತು ಪಿಂಚಣಿ / ಗ್ರಾಚ್ಯುಟಿ ಪಡೆಯುತ್ತಿರುವ ಪ್ರಮಾಣ ಪತ್ರ / ಮಾಜಿ ಸೈನಿಕ ಅವಲಂಬಿತರಾಗಿದ್ದಲ್ಲಿ, ಮಾಜಿ ಸೈನಿಕರು ಸೇವೆಯಲ್ಲಿರುವಾಗ ಮೃತಪಟ್ಟಿದ್ದಲ್ಲಿ

ಅಥವಾ ಖಾಯಂ ಆಗಿ ಗಾಯಗೊಂಡಿರುವ ಪ್ರಮಾಣ ಪತ್ರ. (ಮಾಜಿ ಸೈನಿಕ ಮೀಸಲಾತಿ ಕೋ.. ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

7. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಪ್ರವರ್ಗ-3ಬಿ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳನ್ನು (ಮೀಸಲಾತಿ ಕೋರಿದ್ದಲ್ಲಿ) ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
8. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
9. ಕನ್ನಡ ಮಾತನಾಡುವ ಜ್ಞಾನದ ಬಗ್ಗೆ ನೋಟರಿಯವರ ಮುಂದೆ ಪ್ರಮಾಣೀಕರಿಸಿರುವ ಪ್ರಮಾಣ ಪತ್ರವನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
10. ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ) ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
11. ಸೇವಾನುಭವಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಯಿಂದ ಕನಿಷ್ಠ 02 ವರ್ಷ ಸೇವೆ ಸಲ್ಲಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರ / ಗುತ್ತಿಗೆ ಸಂಸ್ಥೆ ನೀಡಿರುವ ಪ್ರಮಾಣ ಪತ್ರಗಳನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
12. **ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳ ಮೀಸಲಾತಿಗೆ ಸಂಬಂಧಿಸಿದ ಅರ್ಹತಾ ಪ್ರಮಾಣ ಪತ್ರವನ್ನು ದಾಖಲಾತಿಗಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.**

**ಸಿ) ಇನ್ನಿತರೆ ಸೂಚನೆಗಳು**

1) ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಹಾಗೂ ಸಹಿಯನ್ನು ಕಡ್ಡಾಯವಾಗಿ ಅರ್ಜಿಗೆ ಅಪ್‌ಲೋಡ್ ಮಾಡಬೇಕು. ಭಾವಚಿತ್ರ ಹಾಗೂ ಸಹಿಯನ್ನು ಅಪ್‌ಲೋಡ್ ಮಾಡದ ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ.
2) ಅಪೂರ್ಣ ಅರ್ಜಿಗಳನ್ನು ಹಾಗೂ ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾದ ಮಾಹಿತಿಗಳನ್ನು ಅಪ್‌ಲೋಡ್ ಮಾಡದೇ ಇರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
3) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರ ಅದರ ಒಂದು ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ಮತ್ತು ಶುಲ್ಕ ಪಾವತಿಯ ಚಲನ್ ಅನ್ನು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಭದ್ರವಾಗಿ ತೆಗೆದಿಟ್ಟುಕೊಂಡಿರತಕ್ಕದ್ದು.
4) **ಶುಲ್ಕ ಪಾವತಿಯು** ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಕೊನೆಯ ದಿನಾಂಕವಾಗುವುದು.
5) **ದುರ್ನಡತೆ:** ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು, ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ: ಹುದ್ದೆಯ ಸಂದರ್ಶನದಿಂದ/ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.
6) **ಈ ಅಧಿಸೂಚನೆಯ ಪಾಲಿಕೆಯ ಅಧಿಕೃತ ವೆಬ್‌ಸೈಟ್** www.bbmp.gov.in ನಲ್ಲಿ ಪ್ರಚುರಪಡಿಸಲಾಗಿದೆ.
7) **ಈ ಅಧಿಸೂಚನೆ ನೇಮಕಾತಿ ಆದೇಶವಲ್ಲ**
8) **ಪೌರಕಾರ್ಮಿಕರ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ನೇಮಕಾತಿ ಪ್ರಾಧಿಕಾರಿಯಾದ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರು ಕಾಯ್ದಿರಿಸಿಕೊಂಡಿರುತ್ತಾರೆ.**

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**(ಪ.ಜಾ / ಪ.ಪಂ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**

## ನಮೂನೆ – ಡಿ

(ನಿಯಮ 3ಎ (2) (3) ನೋಡಿ)

**ಅನುಸೂಚಿತ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ/ಪ.ಪಂ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ**

## ಪ್ರಮಾಣ ಪತ್ರ

....................................ರಾಜ್ಯದ / ಕೇಂದ್ರಾಡಳಿತ ಪ್ರದೇಶದ *..............................ಜಿಲ್ಲೆಯ /ವಿಭಾಗದ ........................ಗ್ರಾಮ/ಪಟ್ಟಣದ * ನಿವಾಸಿಯಾದ ಶ್ರೀ / ಶ್ರೀಮತಿ ...........................ಎಂಬುವವರ ಮಗ /ಮಗಳಾದ ಶ್ರೀ / ಶ್ರೀಮತಿ ................................ಇವರು ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವ ಜಾತಿ/ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣೀಕರಿಸಿದೆ.

- ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳೂ) ಆದೇಶ 1951

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ರಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971ರ ಮೂಲ ತಿದ್ದುಪಡಿಯಾದಂತೆ)

- ಸಂವಿಧಾನ
- ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956
- ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡಿ ಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959.
- ಸಂವಿಧಾನ (ದಾದರ್ ಮತ್ತು ನಾಗರಹವೇಲಿ) ಅನುಸೂಚಿತ ಜಾತಿಗಳ ಆದೇಶ 1962
- ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964.
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967.
- ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ/ಬುಡಕಟ್ಟುಗಳ ಆದೇಶ 1988
- ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ/ಶ್ರೀಮತಿ/ಕುಮಾರಿ * ....................................... ಮತ್ತು / ಅಥವಾ ಅವನ * / ಅವಳ* ಕುಟುಂಬವು ..................................................ರಾಜ್ಯ/ಕೇಂದ್ರಾಡಳಿತ.......................................... ಪ್ರದೇಶದ...........................................ಜಿಲ್ಲಾ/ವಿಭಾಗದ......................... ಗ್ರಾಮ/ಪಟ್ಟಣದ ಸಾಮಾನ್ಯ ನಿವಾಸಿ(ಗಳು)

ಸಹಿ ----------------------------

ತಹಶೀಲ್ದಾರ್ ----------------------

ಸ್ಥಳ:
ದಿನಾಂಕ:

ಪದನಾಮ
ಕಛೇರಿಯ ಮೊಹರಿನೊಂದಿಗೆ

**ರಾಜ್ಯ / ಕೇಂದ್ರಾಡಳಿತ ಪ್ರದೇಶ ***
***ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟು ಬಿಡಿ / ಹೊಡೆದು ಹಾಕಿ**

**ಸೂಚನೆ:** ಇಲ್ಲಿ ಉಪಯೋಗಿಸಿದ **'ಸಾಮಾನ್ಯ ನಿವಾಸಿಗಳು'** ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950ರ 20ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

ಭಾರತ ಸರ್ಕಾರದ ಪತ್ರ ಸಂಖ್ಯೆ: ಬಿಸಿ 12028/2/76–ಎಸ್‌ಸಿಟಿ–1 ಗೃಹ ಮಂತ್ರಾಲಯ ಅನುಸಾರವಾಗಿ, ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮವಾಗಿರುವುದಕ್ಕಾಗಿ, ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ) ಪತ್ರ ಸಂಖ್ಯೆ:13–2–74 ಇಎಸ್‌ಟಿ (ಎಸ್‌ಸಿಟಿ) ದಿನಾಂಕ: 05.08.1975ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ತನ್ನ ಖಾಯಂ ವಾಸ ಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

**(ಪ್ರರ್ವ–1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**

**ನಮೂನೆ – ಇ**

(ನಿಯಮ 3ಎ (2) (3) ನೋಡಿ)

**ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ**

....................................ಗ್ರಾಮ / ಪಟ್ಟಣದ / ನಗರ ನಿವಾಸಿಯಾದ .......................... ನಿವಾಸಿಯಾದ ಶ್ರೀ / ಶ್ರೀಮತಿ ..............................................ಇವರ ಮಗ /ಮಗಳು / ಪತ್ನಿ / ಪತಿಯಾದ ಶ್ರೀ / ಶ್ರೀಮತಿ .............................................. ಇವರು ಹಿಂದುಳಿದ ವರ್ಗಗಳ (ಪ್ರವರ್ಗ ..........................................................ಜಾತಿಯ ............................ ಉಪ ಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

**ಸ್ಥಳ:**
**ದಿನಾಂಕ:**

**ತಹಶೀಲ್ದಾರ್**
**ತಾಲ್ಲೂಕು**
**ಕಛೇರಿಯ ಮೊಹರು**

**(ಪ್ರವರ್ಗ – 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**

**ನಮೂನೆ – ಎಫ್**

(ನಿಯಮ 3ಎ (2) (3)ನ್ನು ನೋಡಿ)

## ಹಿಂದುಳಿದ ವರ್ಗಗಳಿಗೆ (2ಎ, 2ಬಿ, 3ಎ, 3ಬಿ) ಸೇರಿದ ಅಭ್ಯರ್ಥಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ)

..................................ರಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ ...................... ಇವರ ಮಗ/ ಮಗಳು/ ಪತಿ/ ಪತ್ನಿಯಾದ ಶ್ರೀ / ಶ್ರೀಮತಿ/ ಕುಮಾರಿ ...........................ಇವರು ಮತ್ತು ಆತನ / ಅವಳ ತಂದೆ / ತಾಯಿ/ ಪೋಷಕರು / ಪತ್ನಿ / ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ:ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30-03-2002 ರಲ್ಲಿ ನಿರ್ದಿಷ್ಟ ಪಡಿಸಿದ ಮೇಲುಸ್ತರದ (ಕ್ರೀಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು:

ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕರಾಗಲಿ / ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು:

**ಅಥವಾ**

ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ:

**ಅಥವಾ**

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ.6000-12000/- ಪ್ರಾರಂಭಿಕ ಹಂತ) ಕಡಿಮೆಯಿಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು:

**ಅಥವಾ**

ಆತನ / ಆಕೆಯ ತಂದೆ ತಾಯಿ/ ಪೋಷಕರು / ಪತ್ನಿ / ಪತಿಯ ಆದಾಯವು ಎರಡು ಲಕ್ಷ ಮೀರುವುದಿಲ್ಲವೆಂದು:

**ಅಥವಾ**

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ರಲ್ಲಿ ನಿಗದಿಪಡಿಸಿರುವಂತೆ ಆತನ / ಆಕೆಯ ತಂದೆ ತಾಯಿ / ಪೋಷಕರು / ಪತ್ನಿ / ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕ / ಪತ್ನಿ / ಪತಿಯು ಅಥವಾ ಇವರಿಬ್ಬರೂ 10 ಯೂನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ:30.03.2002ರ ಅನ್ವಯ ಶ್ರೀ / ಶ್ರೀಮತಿ / ಕುಮಾರಿ ................................................ಇವರು ............................ಜಾತಿಗೆ ಸೇರಿದ..............................ಉಪಜಾತಿಯವರಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2002 ದಿನಾಂಕ:30.03.2000ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ.............................................. (2ಎ, 2ಬಿ, 3ಎ, 3ಬಿ) ಕ್ಕೆ ಸೇರಿರುತ್ತಾರೆ.

**ಸ್ಥಳ:**
**ದಿನಾಂಕ:**

**ತಹಶೀಲ್ದಾರ್**

----------- **ತಾಲೂಕು**

## ಪ್ರಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಿದ ಮಾಹಿತಿ / ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ: ತಮ್ಮ ವಿಧೇಯ

ದಿನಾಂಕ: (ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತಾ, ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ಸ್ಥಳ: ತಂದೆ/ತಾಯಿ/ಪೋಷಕರ ಸಹಿ

ದಿನಾಂಕ: (ತಂದೆ/ತಾಯಿ ಜೀವಂತವಿಲ್ಲದಿದ್ದರೆ)

(ಹೆಂಡತಿ/ಗಂಡ/ಇವರ ಸಹಿ)

## ಸ್ಥಳೀಯ ಇಬ್ಬರು ಸಾಕ್ಷಿದಾರರು

ಅಭ್ಯರ್ಥಿಯ ಮತ್ತು ಅವರ ತಂದೆ/ತಾಯಿ/ಪೋಷಕರು/ಪತಿ/ಪತ್ನಿ ಇವರನ್ನು ಹಾಗೂ ಇವರ ಸಹಿಯನ್ನು ಗುರುತಿಸುತ್ತೇವೆ.

ಸಾಕ್ಷಿದಾರರ ಸಹಿ 1)

(ಪೂರ್ಣ ವಿಳಾಸದೊಂದಿಗೆ) 2)

## ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ/ಶ್ರೀಮತಿ ...................................................... ಎಂಬುವವರ ಮಗ / ಮಗಳು / ಪತಿ / ಪತ್ನಿ, ಶ್ರೀ/ಶ್ರೀಮತಿ/ಕುಮಾರಿ .................................ಎಂಬುವವರು ಕರ್ನಾಟಕ ರಾಜ್ಯದ .............ಜಿಲ್ಲೆಯ ವಿಭಾಗ ..............................ಗ್ರಾಮ/ಪಟ್ಟಣ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆ ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.

2. ಶ್ರೀ/ಶ್ರೀಮತಿ/ಕುಮಾರಿ ...................................ಇವರ ತಂದೆ/ತಾಯಿ/ಪೋಷಕರು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ:31.01.1995 ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ತರದಲ್ಲಿ (Creamy Layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

**ಸ್ಥಳ:** **ತಹಶೀಲ್ದಾರ್**

**ದಿನಾಂಕ:** **ತಾಲ್ಲೂಕು**

**ಕಛೇರಿಯ ಮೊಹರು**

**ಸೂಚನೆ-1** : ಇದರಲ್ಲಿ ಉಪಯೋಗಿಸಲಾದ 'ಸಾಮಾನ್ಯ ನಿವಾಸಿ' ಎಂಬ ಪದವು 1950ರ ಜನತಾ ಪ್ರಾತಿನಿಧ್ಯ ಕಾಯ್ದೆಯ 20ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.

**ಸೂಚನೆ-2** : ಪರಿಶೀಲನಾ ಪ್ರಮಾಣ ಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ:ಎಸ್‌ಡಬ್ಲೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ:31.01.1995 ರನ್ವಯ ಮೇಲುಸ್ತರ (Creamy Layer) ದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕದ್ದು.

## ನಮೂನೆ – 2
## ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ಶ್ರೀಮತಿ ........................................................ ರವರ ಮಗ / ಮಗಳು / ಪತಿ / ಪತ್ನಿ, ಶ್ರೀ/ಶ್ರೀಮತಿ/ಕುಮಾರಿ ........................ಜಿಲ್ಲೆ................. ತಾಲ್ಲೂಕು .......................ಗ್ರಾಮದಲ್ಲಿ .................ವಾಸವಾಗಿರುವ ಇವರು ಒಂದನೇ ತರಗತಿಯಿಂದ ..........ತರಗತಿಯವರೆಗೆ ................ಜಿಲ್ಲೆ ...............ತಾಲ್ಲೂಕು .............ಪಟ್ಟಣ ..........ಶಾಲೆಯಲ್ಲಿ ವ್ಯಾಸಂಗ ಮಾಡಿ ............ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿ ಒಂದು ದೊಡ್ಡ ನಗರ ಪ್ರದೇಶ ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು

ಮೇಲು ರುಜು
ಕ್ಷೇತ್ರ ಶಿಕ್ಷಣ ಅಧಿಕಾರಿ
ಕಛೇರಿಯ ಮೊಹರು

ಸಹಿ
ಮುಖ್ಯೋಪಾಧ್ಯಾಯರ ಸಹಿ
ಮತ್ತು ಸಂಸ್ಥೆಯ ಮೊಹರು

ಸ್ಥಳ:
ದಿನಾಂಕ:

**ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 44 ಸೆನೆನಿ 2001 ದಿನಾಂಕ: 27.07.2001**

**ನಮೂನೆ – 3**

**ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿ**

ಶ್ರೀ/ಶ್ರೀಮತಿ ....................................................ಎಂಬುವವರ ಮಗ / ಮಗಳು / ಪತಿ / ಪತ್ನಿ ಶ್ರೀ/ಶ್ರೀಮತಿ/ಕುಮಾರಿ ............................ಜಿಲ್ಲೆ ....................ತಾಲ್ಲೂಕು ..............ಗ್ರಾಮದಲ್ಲಿ ....................ವಾಸವಾಗಿರುವ ಇವರು: ಇವರ ಕುಟುಂಬದವರ ಅವಲಂಬಿತರಾಗಿದ್ದ ಈ ಕೆಳಕಂಡ ಆಸ್ತಿಯನ್ನು ....................ಯೋಜನೆಗಾಗಿ .................... ಇಸವಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ:–

(ಅ) * * ವಾಸಿಸುವ ಮನೆ ಮತ್ತು ತಾವು ಅವಲಂಬಿತರಾಗಿದ್ದ ಅವರ ಕೃಷಿ ಭೂಮಿಯ ಅರ್ಧದಷ್ಟು

(ಆ) * * ಯೋಜನೆಗೆ ಮೊದಲು ಭೂಮಿಯನ್ನು ಹೊಂದಿರದೆ: ಯೋಜನೆಯಿಂದ ತಾವು ವಾಸಿಸುವ ಮನೆ:

(ಇ) * * ತಾವು ಅವಲಂಬಿತರಾಗಿದ್ದ ತಮ್ಮ ಕೃಷಿ ಭೂಮಿಯ ಅರ್ಧದಷ್ಟು ಅಥವಾ ಅದಕ್ಕಿಂತ ಕಡಿಮೆ ಕೃಷಿಭೂಮಿ:

(ಈ) * * ಇತರ ಇನ್ಯಾವುದೇ ಪ್ರಕರಣದಲ್ಲಿ ಯೋಜನೆಯಿಂದ ನಿರ್ವಸಿತರಾದವರು.

ಸ್ಥಳ:
ದಿನಾಂಕ:

ತಹಶೀಲ್ದಾರ್
ತಾಲ್ಲೂಕು ಕಛೇರಿಯ ಮೊಹರು

**ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ**

ಶ್ರೀ/ಶ್ರೀಮತಿ ______ರವರ ಮಗ/ಮಗಳು/ಪತಿ/ ಪತ್ನಿ, ಶ್ರೀ/ಶ್ರೀಮತಿ/ಕುಮಾರಿ ಜಿಲ್ಲೆ_____ಜಿಲ್ಲೆ ತಾಲ್ಲೂಕು ......................ಗ್ರಾಮದಲ್ಲಿ ..................ವಾಸವಾಗಿರುವ ಇವರು.....ನೇ ತರಗತಿಯಿಂದ ..........ನೇ ತರಗತಿಯವರೆಗೆ ................ಶೈಕ್ಷಣಿಕ ವರ್ಷದಿಂದ ..............ಶೈಕ್ಷಣಿಕ ವರ್ಷದವರೆಗೆ .............ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ:
ದಿನಾಂಕ:

ಮುಖ್ಯೋಪಾಧ್ಯಾಯರ ಸಹಿ ಮತ್ತು ಸಂಸ್ಥೆಯ ಮೊಹರು

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೆನೆನಿ 2005, ದಿನಾಂಕ: 19.11.2005

## CERTIFICATE FOR THE PERSONS WITH DISABILITIES

This is to certify that Sri/ Smt/ Kum ................................ .....................son /wife/daughter of Sri ............................................................................................ Age...............................old, male/ female, Registration No.........................is a case of ..............................He/She is physically disabled/visual disabled/speech and hearing disabled and has..........................% (...................percent) permanent (physical impairment visual impairment speech & hearing impairment) in relation of his/her............................................

**Note:**

1. This condition is progressive/ non-progressive/likely to improved/not likely to improve. *
2. Re-assessment is not recommended/is recommended after a period of ............................months/years. *

* Strike out which is not applicable

(Recent Attested
Photograph showing
the disability
affixed here)

Sd/-
(Doctor)
(Seal)

Sd/-
(Doctor)
(Seal)

Sd/-
(Doctor)
(Seal)

Countersigned by the
Medical Superintendent CMO/Head
of Hospital (with seal)

Signature / Thumb impression
of the disabled person

**ANNEXURE-A**
**ELIGIBILITY CERTIFICATE**
**[Under Article 371(J)]**
**[See rule 3(3)]**

[The Karnataka Public Employment (Reservation in Appointment
for Hyderabad-Karnataka Region Rules
for Issual of Certificates,2013]

Sri./Smt______________ s/o/w/o________________ is a local person of the Village/Town ______________ of Taluka ________________of District ___________ of Karnataka State.

Place:__________
Date:___________

Name:____________
Assistant Commissioner
______________Sub Division
______________ District

ಅನುಬಂಧ–ಬಿ

# PHYSICAL FITNESS CERTIFICATE

Report of the Medical Officer:

Name of the Candidate : ______________________________ is

age is according to his/her own statement ________________ year and by appearance about ____________ years

Physical Examination :

1. General Development: Good Fair Poor

   Nutrition: Average Obese Thin

   Height (Without Shoes)

   Weight

   Change in weight (Recent loss of weight in Kgs)

   Temperature

2. Chest Measurement

   a) (After full inspiration)

   b) (After full expiration)

3. Skin:- Any obvious disease

4. Eyes:- Any disease

   i) Night Blindness

   ii) Defect in colour vision

   iii) Field of vision

   iv) Visual Actuity

| Acuity of vision | | Naked Eye | With Glasses | Strength of Glasses | | |
|---|---|---|---|---|---|---|
| | | | | Spn | Cyl | Akis |
| Near Vision | R.E | | | | | |
| | L.E | | | | | |
| Distant Vision | R.E | | | | | |
| | L.E | | | | | |

5. Ears : inspection Hearing Right Ear Left Ear

6. Glands Thyroid

7. Condition of Teeth

8. Respiratory System: Does physical Examination reveal anything abnormal in the respirator organs?

   If yes explain full:

9. Circulation System:

   a) Heart: Rate: Standing

   After hopping (25 times)

   2 Minutes after hopping

   Any organic lesions of the cardia

   b) Blood pressure: Systolic Distolic

10. Abdomen: Girth Tenderness Hernia

a) Palpable: Liver Speleen Kidneys Any Tumour
b) Haemorrhoids Pistuals

11. Nervous System: Indication of nervous or mental disabilities

12. Loco-Motor System: Any abnormality

13. Genito Urinary : Any evidence of Hydrocele, Varicocele etc.
Urine Analysis:
a) Physical appearance b) S.P Gravity c) Albumin
d) Sugar e) Casts f) Cells

14. Report of Screening/ X-Ray
Examination of chest abdomen

15. Is he are she Suffering from any other illness likely to render him unfit for the efficient discharge of his duties in the service for which he is a candidate?

I, do hereby certify that I have examined Sri/Smt…………………………………………………………………….. candidate applying for the post of Pourakarmika at BBMP and that I cannot discover that he/she has any disease, constitutional affliction or bodily infirmity except …………………………………………………………………………………………………… ………………………… I do not consider this as disqualification if selected for employment for the post of Pourakarmika at BBMP.

Date:

Place: (SIGNATURE WITH SEAL)